

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 07 Issue : 240 Tuesday 03-06-2025 E-mail : maruti.b.hosamani76@gmail.com Page: 4 Price : Rs. 1/-


## ಒಂದನೇ ತರಗತಿ ಮಕ್ಕಳಿಗೆ ಅಕ್ಷತೆಯ ಮೇಲೆ ಪ್ರಥಮ ಅಕ್ಷರ ಅಭ್ಯಾಸ ಮಾಡಿಸಿದ ಗುರು ವೃಂದದವರು



**ಸಿಹಿಕಹಿಸುದ್ದಿ,ಗುಂಡನಪಲ್ಲೆ:**ಬಾಗಲಕೋಟ ಜಿಲ್ಲೆಯ ಬಾಗಲಕೋಟ ತಾಲೂಕಿನ ಗುಂಡನಪಲ್ಲೆ ಗ್ರಾಮದ ಸಾರ್ವಜನಿಕ ಶಿಕ್ಷಣ ಇಲಾಖೆ ಬಾಗಲಕೋಟ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಸಹಯೋಗದಲ್ಲಿ, ಶಾಲಾ ಶ್ರೀಸರಸ್ವತಿ ದೇವಿ ಮಂದಿರದಲ್ಲಿ ಶ್ರೀ ಗಣೇಶ ಹಾಗೂ ಶ್ರೀ ಸರಸ್ವತಿದೇವಿ ಮೂರ್ತಿಗೆ ಪೂಜೆ ಸಲ್ಲಿಸುವ ಮುಖಾಂತರ ಒಂದನೇ ತರಗತಿ ಪ್ರವೇಶ ಪಡೆದ ಮಕ್ಕಳಿಗೆ ಅಕ್ಷರ ಅಭ್ಯಾಸ ಮಾಡಿಸಲಾಯಿತು. ಒಂದನೇಯ ತರಗತಿಗೆ ಪ್ರವೇಶ ಪಡೆದ ಮಕ್ಕಳಿಗೆ ಶ್ರೀ ಓಂ ಗಣೇಶ ಶ್ರೀ ಸರಸ್ವತಿ ದೇವಿ ಸ್ತೋತ್ರಗಳೊಂದಿಗೆ ಅ ಆ ಇ ಈ ಉ ಅಕ್ಷರ ಅಭ್ಯಾಸವನ್ನು ಶಾಲಾ ಮುಖ್ಯ ಶಿಕ್ಷಕ ಸಹ ಶಿಕ್ಷಕರಾದ ಆರ್.ಬಿ ಅಂತರತಾನಿ, ನಾರಾಯಗ-ೌಡ ಪಾಟೀಲ ರಾಜೇಶ ಹುಲಗನ್ನವರ ಗುರುಮಾತೆಯರಾದ ಭಾರತಿ ಗಣಿಯಾರ ಸುನಿತಾ ಮಾಸ್ತಿ ಅನಿತಾ ಗದಿಗೆನ್ನವರ ಆರೋಗ್ಯ ನಿರೀಕ್ಷಣಾಧಿಕಾರಿ ಎಸ್.ಎಸ್ ಅಂಗಡಿ ಒಂದನೇ ತರಗತಿ ಮಕ್ಕಳಿಗೆ ಅಕ್ಷತೆ-ಯ ಮೇಲೆ ಓಂ ಶ್ರೀ ಗಣೇಶಾಯನಮಃ ಓಂ ಶ್ರೀ ಸರಸ್ವತಿ ನಮಃ ಗ್ರಾಮ ದೇವಿ ದುರ್ಗಾದೇವಿ ಶ್ರೀ ದಾಳಮ್ಮದೇವಿ ಬರಹ ಹಾಗೂ ವಿದ್ಯಾದೇವತೆ ನಾಮಸ್ಮರಣೆಯ ಮೂಲಕ "ಓಂ" ಅ ಆ ಇ ಈ" ಮಕ್ಕಳಿಗೆ ಅಕ್ಷರ ಅಭ್ಯಾಸ ಮಾಡಿಸಲಾಯಿತು. ಒಂದನೇ ತರಗತಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಉತ್ಸಾಹ ದಿಂದ ಗುರುಗಳು ಹೇಳಿ ಬರಿಸಿದ ಅಕ್ಷರಗಳನ್ನು ಓದಿ ಬರೆದರು. ಪ್ರಥಮ ಅಕ್ಷರ ಅಭ್ಯಾಸ ಕಾರ್ಯಕ್ರಮದಲ್ಲಿ, ಶಾಲಾ ಗುರು ವೃಂದವರು, ಶಾಲಾ ಮುದ್ದು ಮಕ್ಕಳು ಭಾಗವಹಿಸಿದ್ದರು.

## ನಮ್ಮ ಜೀವನವನ್ನು ನಾವೇ ರೂಪಿಸಿ ಕೊಳ್ಳಬೇಕು-ಮಕ್ಕಳಿಗೆ ಯತೀಶ್.ಎಂ ಸಿದ್ದಾಪುರ ಕರೆ



**ಸಿಹಿ ಕಹಿ ಸುದ್ದಿ,**
**ಚಳ್ಳಕೆರೆ:**ನಮ್ಮಜೀವನವನ್ನುನಾವೇ ರೂಪಿಸಿ ಕೊಳ್ಳಬೇಕು ಎಂದು ಚಳ್ಳಕೆರೆಯ ಶ್ರೀಶಾರದಾಶ್ರಮದ ಸ್ವಯಂ ಸೇವಕ ಹಾಗೂ ಲೇಖ-ಕ ಯತೀಶ್.ಎಂ ಸಿದ್ದಾಪುರ ಮಕ್ಕಳಿಗೆ ಕರೆ ನೀಡಿದರು. ನಗರದ ವಾಸವಿ ಕಾಲೋನಿಯ ಶ್ರೀಶಾರದಾಶ್ರಮದಲ್ಲಿ ಮಕ್ಕಳಿಗಾಗಿ ಆಯೋಜಿಸಿದ್ದ "ವಿವೇಕ ವಿಹಾರ ವಿದ್ಯಾರ್ಥಿ ಶಿಬಿರ" ದಲ್ಲಿ ಪಾಲ್ಗೊಂಡು ಅವರು "ನನ್ನ ಏಳ್ಗೆಗೆ ನಾನೇ ಶಿಲ್ಪಿ" ಎಂಬ ವಿಷಯವಾಗಿ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದ ಪ್ರಯುಕ್ತ ಭಜನೆಯನ್ನು ಯತೀಶ್.ಎಂ ಸಿದ್ದಾಪುರ ನಡೆಸಿ ಕೊಟ್ಟರೆ ಮಕ್ಕಳಿಗೆ ನೆನಪಿನ ಶಕ್ತಿ ಹೆಚ್ಚಿಸುವ ಆಟಗಳನ್ನು ಸಂತೋಷಕುಮಾರ ಅಗಸ್ತ್ಯ ಮತ್ತುಋತಿಕ್‌ಆಡಿಸಿದರು. ಈ ಶಿಬಿರದ ದಿವ್ಯ ಸಾನಿಧ್ಯವನ್ನು ಆಶ್ರಮದ ಅಧ್ಯಕ್ಷರಾದ ಮಾತಾಜೀ ತ್ಯಾಗಮಯೀ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಡಾ, ಭೂಮಿಕ, ಗುರುಪ್ರಸಾದ್, ಬಿ.ಎಸ್ ಶಾಶ್ವತ್, ಅದಿಸ್, ಹರ್ಷಿತಾ, ಪ್ರತೀಕ್ಷಾ, ಯುಕ್ತ, ಮನಸಿರಿ, ನಿಖಿಲೇಶ್ ಯಾದವ್, ಧ್ರುವ ನಾರಾಯಣ,ವಿವಿಕ್ತ, ವೈಷ್ಣವಿ, ಪ್ರಣಾಮ್ಯ, ಕೋಮಲಸಿರಿ, ಯಶಸ್ವಿ,ದವನ್, ಸಹಸ್ರ ಸೇರಿದಂತೆ ವಿದ್ಯಾರ್ಥಿಗಳು ಪಾಲೆ ್ಗಂಡಿದ್ದರು.

**ವರದಿ-ಯತೀಶ್.ಎಂ ಸಿದ್ದಾಪುರ, ಚಳ್ಳಕೆರೆ.**

## ಬಾಲ ಭಾರತಿ ಶಾಲೆಯಲ್ಲಿ ಸಂಭ್ರಮದ ಶಾಲಾ ಪ್ರಾರಂಭೋತ್ಸವ



**ಸಿಹಿ ಕಹಿ ಸುದ್ದಿ, ಆಲಮೇಲ :** ಪಟ್ಟಣದ ಶ್ರೀ ವಿಶ್ವೇಶ್ವರ ಬಾಲ ಭಾರತಿ ಅನುದಾನಿತ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದಾಖಲಾತಿ ಆಂದೋಲನ ಹಾಗೂ ಶಾಲಾ ಪ್ರಾರಂಭೋತ್ಸವವನ್ನು ಮಕ್ಕಳಿಗೆ ತಿಲಕ ಇಟ್ಟು ಆರತಿ ಬೆಳಗಿ ಪುಷ್ಪಾರ್ಚನೆ ಮಾಡುವುದರ ಮುಖಾಂತರ ಪಠ್ಯ ಪುಸ್ತಕ ವಿತರಣೆ ಮಾಡಿ ಸ್ವಾಗತಿಸ ಲಾಯಿತು.

ಸಂಸ್ಥೆಯ ಅಧ್ಯಕ್ಷರು ಶ್ರೀಶೈಲಪ್ಪ ಆಯ್ ಜೋಗೂರ ಮಾತನಾಡಿ ಮಕ್ಕಳು ದೇವರು ಸಮಾನ ಅಂತಹ ಮಕ್ಕಳಿಗೆ ವಿನೂತನವಾಗಿ ತಿಲಕವಿಟ್ಟು, ಆರತಿ ಮಾಡುವುದರ ಮುಖಾಂತರ ಪುಷ್ಪಾರ್ಚನೆ ಮಾಡಿ ಸ್ವಾಗತಿಸಿರುವುದು ಸಂತೋಷ ತಂದಿದೆ. ವಿದ್ಯಾರ್ಥಿಗಳು ನಿರಂತರ ಅಧ್ಯಯನ ಮಾಡಬೇಕು ಸರಕಾರದ ಸೌಲಭ್ಯಗಳನ್ನು ಪಡೆದು ಉನ್ನತ ವ್ಯಾಸಂಗ ಪಡೆದು ಶಾಲೆಗೆ ಕೀರ್ತಿ ತರಬೇಕು ಎಂದರು. ಮುಖ್ಯ ಶಿಕ್ಷಕ ಲಕ್ಷ್ಮೀಪುತ್ರ ಕಿರನಳ್ಳಿ ಮಾತನಾಡಿ ಇಲಾಖೆಯ ಸುತ್ತೋಲೆಯಂತೆ ಶಾಲಾ ಸ್ವಚ್ಚತಾ ಮಾಡಿಕೊಂಡು ತಳಿರುತೋರಣಗಳಿಂದಅಲಂಕರಿಸಿಮೊದಲದಿನವೇ ಪಠ್ಯ ಪುಸ್ತಕಗಳನ್ನು ವಿತರಣೆ ಮಾಡಿ ಬಿಸಿಯೂಟದ ಜೊತೆಗೆ ಸಿಹಿಯನ್ನು ಬಡಸಿ ಮಕ್ಕಳನ್ನು ಶಾಲಾ ಪ್ರಾರಂಭ ದಂದು ಸ್ವಾಗತಿಸಲಾಯಿತು.

ಈ ವೇಳೆ ಸದಸ್ಯರಾದ ಅಲೋಕ ಬಡದಾಳ, ಮುಖ್ಯ ಶಿಕ್ಷಕ ಲಕ್ಷ್ಮೀಪುತ್ರ ಕಿರನಳ್ಳಿ, ಶಿಕ್ಷಕರಾದ ಚಂದ್ರಕಾಂತ ದೇವರಮನಿ, ಪ್ರಶಾಂತ ಗಡದೆ,ಸುವರ್ಣ ಸಾರಂಗಮಠ, ಲಕ್ಷ್ಮೀಬಾಯಿ ಹಳೇಮನಿ, ಸೀತಾ ಆರೇಶಂಕರ, ಸರುಬಾಯಿ ಬಂಡಗಾರ, ವೀಣಾ ಗುಡಿಮಠ ಮುಂತಾದವರು ಉಪಸ್ಥಿತರಿದ್ದರು.

## ಶಶಿಕಾಂತರ 'ತಂತ್ರ'ಕ್ಕೆ ಪ್ರಶಸ್ತಿಗಳ ಸುರಿಮಳೆ



**ಸಿಹಿ ಕಹಿ ಸುದ್ದಿ,**
**ಬೆಂಗಳೂರ:** ಸಿಲ್ವರ್‌ಸ್ಕೈ ಪ್ರೊಡಕ್ಷನ್ ಸಿನಿಮಾ ಸಂಸ್ಥೆಬೆಂಗಳೂರುನಿರ್ಮಿಸಿದ ಕುತೂಹಲಭ-ರಿತ ಹಾರರ್ ಕಥೆ ಹೊಂದಿದ 'ತಂತ್ರ' ಕನ್ನಡ ಚನಲಚಿತ್ರಕ್ಕೆ ತೆಲಂಗಾಣ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ-2025 ರಲ್ಲಿ ಎರಡು ವಿಭಾಗದಲ್ಲಿ ಪ್ರಶಸ್ತಿ ಪಡೆದಿದ್ದಲ್ಲದೆ, ಜಿಆಯ್ ಎಫ್ ಸಿ ಚಲನಚಿತ್ರೋತ್ಸವಕ್ಕೂ ಚಿತ್ರ ಆಯ್ಕೆ ಆಗಿದ್ದಕ್ಕೆ ಚಿತ್ರ ತಂಡ ಖುಷಿಯಲ್ಲಿದೆ.

ಭಾರತೀಯ ಚಲನಚಿತ್ರ ನಿರ್ಮಾಪಕರ ಸಂಘ,ತೆಲಂಗಾಣದಲ್ಲಿ ಆಯೋಜಿಸಿದ್ದ ಚಲನಚಿತ್ರೋತ್ಸವದಲ್ಲಿ ಐಎಫ್ ಎಮ್ ಎ ರಾಷ್ಟ್ರೀಯ ಕಾರ್ಯದರ್ಶಿ ಶ್ರೀ ಪುಲಗಂ ರಾಮಚಂದ್ರ ರೆಡ್ಡಿ ಮತ್ತು ರಾಷ್ಟ್ರೀಯ ಅಧ್ಯಕ್ಷ ಶ್ರೀದಿಲೀಪಕುಮಾರ್ ಎಚ್ ಆರ್ ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. ಬೆಸ್ಟ್ ಹಾರರ್ ಫಿಲ್ಮ್, ಬೆಸ್ಟ್ ರಿ-ರೆಕಾ-ರ್ಡಿಂಗ್ ಸೌಂಡ್ ವಿಭಾಗಗಳಲ್ಲಿ ಪ್ರಶಸ್ತಿ ಪಡೆದಿದ್ದಕ್ಕೆ ನಿರ್ಮಾಪಕ,ನಿರ್ದೇಶಕರು ಖುಷಿಯಾಗಿದ್ದಾರೆ. ಬೆಂಗಳೂರು , ಬೆಳಗಾವಿ, ಸಂಕೇಶ್ವರ, ಹುಬ್ಬಳ್ಳಿ-ಧಾರವಾಡ ಸುತ್ತಮುತ್ತ ಚಿತ್ರದ ಚಿತ್ರೀಕರಣ ನಡೆಸಲಾದ ಈ ಚಿತ್ರದಲ್ಲಿ ನಾಯಕರಾಗಿ ಶಶಿಕಾಂತ್ ,ನಾಯಕಿಯರಾಗಿ ಸೌಜನ್ಯ ಮತ್ತು ಮೇಘಾ, ಹಾಗೂ ಎರಡನೇ ನಾಯಕನಾಗಿ ನಟ ವಿಕ್ರಾಂತ್ , ಪ್ರಮುಖ ಪಾತ್ರದಲ್ಲಿ ಸಾಮ್ರಾಟ್ ನಟಿಸಿದ್ದಾರೆ . ಪಾರು ದಾವಣಗೆರೆ ಒಂದು ವಿಶೇಷವಾದ ಗೀತೆಯಲ್ಲಿ ಹೆಜ್ಜೆ ಹಾಕಿದ್ದಾರೆ . ಹಾಸ್ಯ ಪಾತ್ರದಲ್ಲಿ ಜೈ ಅಮೋಘ ದಾಸ್ ಅಲ್ಲದೆ ಸಂತೋಷ್ ಕೇರಿ ಎಂಬ ಜನಪ್ರಿಯ ಯೂಟ್ಯೂಬರ್ ಸಹ ಪ್ರಮುಖ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ .

ಛಾಯಾಗ್ರಹಣ-ರೋಹನ ದೇಸಾಯಿ, ವರ್ಧನ ಬಾಗಲಕೋಟೆ, ಕಥೆ-ವಿಶ್ವನಾಥ-',ಶಶಿಕಾಂತ,ಸಾಮ್ರಾಟ, ಚಿತ್ರಕಥ-',ಸಂಭಾಷಣೆ-ವಿಶ್ವನಾಥ, ಸಾಮ್ರಾಟ, ಸಂಗೀತ ರಮೇಶ್ ಕೃಷ್ಣ , ರೋಹನ್ ದೇಸಾಯಿ , ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು ಪ್ರಖ್ಯಾತ ಗಾಯಕರಾದ ರಾಜೇಶಕೃಷ್ಣ 'ಓಂ ನಮೋ' ಎಂಬ ಹಾಡನ್ನು ಹಾಡಿದ್ದಾರೆ. ಮೂರು ಹಾಡುಗಳಿಗೆ ಮಾಳು ನಿಪನಾಳ, ಪ್ರಣತಿ ರಾವ್, ಆರಿಫ್ ಅಸ್ಲಾಂ , ಮೇಘನಾ ಕುಲಕರ್ಣಿ ಧ್ವನಿ ನೀಡಿದ್ದಾರೆ, ಸಂಕಲನ / ಡಿಐ ಓಂ ಸರವಣನ್, ಪತ್ರಿಕಾ ಸಂಪರ್ಕ ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿ ಅವರದಿದೆ. ವಿಜಯಪುರದ ನಟ-ರಾಜ ಎಂದೆ ಖ್ಯಾತರಾದ ಶಶಿಕಾಂತ್ ಪಿ ನಾಟಿಕರ್ ನಟಿಸಿ ನಿರ್ಮಿಸಿದ್ದು, ಸಹ ನಿರ್ದೇಶನ ಸಾಮ್ರಾಟ ಶ್ರೀನಿವಾಸ.ಎಸ್.ಸಿ, ಅಶೋಕ ಕಂಬ್ಳಿ, ಸಹಾಯಕ ನಿರ್ದೇಶನ ವಿತೇಶ ಮಂಜುನಾಥ ರಾಜ, ಅಜಯ ಎ.ಜೆ, ದುರ್ಗೇಶ(ರಾಯದುರ್ಗ),ಭರ'ಣಿ, ಸುಮಂತ ಕಾಮತ, ಮಂಜುನಾಥ ಬಂಕಾಪೂರ ,ಈ ಮೊದಲೇ 'ಶಂಖನಾದ' ಚಲನಚಿತ್ರ ನಿರ್ದೇಶಿಸಿದ್ದ ಗುಳೇದಗುಡ್ಡದ ವಿಶ್ವನಾಥ ಅವರ ನಿರ್ದೇಶನದ ಎರಡನೇ ಚಿತ್ರಇದಾಗಿದೆ.ಜುಲೈತಿಂಗಳು ರಾಜ್ಯಾದ್ಯಂತ ಚಿತ್ರ ಬಿಡುಗಡೆ ಮಾಡುವದಾಗಿ ನಿರ್ಮಾಪಕ ಶಶಿಕಾಂತ ತಿಳಿಸಿದ್ದಾರೆ.

* * *

**ಡಾ.ಪ್ರಭು ಗಂಜಿಹಾಳ**
**ಮೊ: 9448775346**

## ಮುಸ್ಲಿಂ ಬ್ಯಾಂಕ್ ನಿವೃತ್ತ ನೌಕರರಿಗೆ ಬಿಳ್ಕೊಡುಗೆ ಸಮಾರಂಭ



**ತಾಳಿಕೋಟಿ :** ಪಟ್ಟಣದ ಮುಸ್ಲಿಂ ಸಮಾಜದ ಪ್ರತಿಷ್ಠಿತ ದಿ ಮುಸ್ಲಿಂ ಕೋ ಆಪರೇಟಿವ್ ಬ್ಯಾಂಕ್ ನಲ್ಲಿ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸಿ ನಿವೃತ್ತರಾದ ಎ.ಎಚ್. ಥಾಲಾಯತ ಹಾಗೂ ಸಿಪಾಯಿ ಖಾಜಾಹುಸೇನ್ ಕೆಂಭಾವಿ ಇವರನ್ನು ಬ್ಯಾಂಕಿನ ಆಡಳಿತ ಮಂಡಳಿ, ಸಿಬ್ಬಂದಿ ವರ್ಗ ಹಾಗೂ ವಿವಿಧ ಸಂಘ-ಸಂಸ್ಥೆಗಳಿಂದ ಸನ್ಮಾನಿಸಿ ಬಿಳ್ಕೊಡಲಾಯಿತು. ಶನಿವಾರ ಸಂಜೆ ಬ್ಯಾಂಕಿನ ಸಭಾಂಗಣದಲ್ಲಿ ನಡೆದ ಈ ಬೀಳ್ಕೊಡುವ ಸಮಾರಂಭದಲ್ಲಿ ಬ್ಯಾಂಕಿನ ನಿರ್ದೇಶಕ ಇಬ್ರಾಹಿಂ ಮನ್ಸೂರ್ ಮಾತನಾಡಿ ನಮ್ಮ ಬ್ಯಾಂಕಿನ ಈ ಇಬ್ಬರು ನೌಕರರು ತಮ್ಮ ಸೇವೆಯ ಉದ್ದಕ್ಕೂ ಅತ್ಯಂತ ನಿಷ್ಠೆ ಹಾಗೂ ಪ್ರಾಮಾಣಿಕತೆಯಿಂದ ಆಡಳಿತ ಮಂಡಳಿ ಹಾಗೂ ಗ್ರಾಹಕರ ಪ್ರೀತಿ ವಿಶ್ವಾಸವನ್ನು ಗೆದ್ದಿದ್ದಾರೆ.ಬ್ಯಾಂಕಿನ ಅಭಿವೃದ್ಧಿಗೆ ಅವರ ಸೇವಾ ಕೊಡುಗೆ ಅಪಾರವಾಗಿದೆ ಅದನ್ನು ನಾವು ಎಂದೂ ಮರೆಯಲು ಸಾಧ್ಯವಿಲ್ಲ ಅವರ ವಿಶ್ರಾಂತ ಬದುಕು ನೆಮ್ಮದಿ ದಾಯಕವಾಗಿರಲಿ ಎಂದು ನಾವು ಹಾರೈಸುತ್ತೇವೆ ಎಂದರು. ಕಾರ್ಯಕ್ರಮದಲ್ಲಿ ಬ್ಯಾಂಕಿನ ಅಧ್ಯಕ್ಷ ಚಂದಾಹುಸೇನ ಖಾಂಜಾದೆ, ಉಪಾಧ್ಯಕ್ಷ ರಫೀಕ ಬೇಪಾರಿ, ನಿರ್ದೇಶಕರಾದ ದಾದಾಪೀರ ಚೌಧರಿ, ಮೆಹಬೂಬ ಕೆಂಬಾವಿ, ತನ್ವೀರ್ ಮನಗೂಳಿ, ಸಿಕಂದರ ಬಾಷಾ ಡೋಣಿ, ಫಯಾಜ್ ಉತ್ನಾಳ, ಮಹಮ್ಮದ್ ಶಫೀಕ್ ಇನಾಮದಾರ, ಮುನ್ನಾ ಅರ್ಜುಣಗಿ, ಆದಮಸಾಬ ಅತ್ತಾರ, ಮಹಿಳಾ ನಿರ್ದೇಶಕೀಯರಾದ ಸಕೀನಾಬಿ ಲಾಹೋರಿ,ಮಾಜಾನಬಿ ಚನ್ನೂರ,ಸಮಾಜದ ಗಣ್ಯರು ಮುಖಂಡರು ವಿವಿಧ ಸಂಘ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಬ್ಯಾಂಕಿನ ಸಿಬ್ಬಂದಿಗಳು ಇದ್ದರು.

## ನಿವೃತ್ತ ಕಿರಿಯ ಸಹಾಯಕ ಗೌಡಗೇರಿಗೆ ಅವರಿಗೆ ಬಿಳ್ಕೊಡುಗೆ ಸಮಾರಂಭ



**ತಾಳಿಕೋಟಿ :** ಪಟ್ಟಣದ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಪತ್ತಿನ ಸಹಕಾರಿ ಸಂಘದಲ್ಲಿ ಕಿರಿಯ ಸಹಾಯಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಉಮರಸಿಂಗ್ ವಿ. ಗೌಡಗೇರಿ ಇವರನ್ನು ಆಡಳಿತ ಮಂಡಳಿ ವತಿಯಿಂದ ಶನಿವಾರ ಸನ್ಮಾನಿಸಿ ಬಿಳ್ಕೊಡಲಾಯಿತು.

ಈ ಸಂದರ್ಭದಲ್ಲಿ ಸಂಘದ ನಿರ್ದೇಶಕ ಗೋವಿಂದಸಿಂಗ್ ಮೂಲಿಮನಿ ಅವರು ಮಾತನಾಡಿ ನಮ್ಮ ಸಂಘದಲ್ಲಿ ಒಬ್ಬ ದಿನಗೂಲಿ ನೌಕರನಾಗಿ ಸೇರಿಕೊಂಡು ಸುಮಾರು 30 ವರ್ಷಗಳ ಸುದೀರ್ಘ ಸೇವೆಯನ್ನು ಸಲ್ಲಿಸಿದ ಗೌಡಗೇರಿ ಅವರು ಇದೀಗ ಕಿರಿಯ ಸಹಾಯಕರಾಗಿ ನಿವೃತ್ತಿ ಹೊಂದುತ್ತಿದ್ದಾರೆ ಅವರ ಕರ್ತವ್ಯ ನಿಷ್ಠೆ, ಸಮಯ ಪಾಲನೆ ಹಾಗೂ ಸಂಘದ ಕೆಲಸಗಳ ಕುರಿತು ಅವರಲ್ಲಿದ್ದ ಕಾಳಜಿ ಅನುಕರಣೀಯವಾಗಿದೆ. ಇಂದು ನಾವೊಬ್ಬ ಕ್ರಿಯಾಶೀಲ ಸಿಬ್ಬಂದಿಯನ್ನು ಬೀಳ್ಕೊಡುತ್ತಿದ್ದೇವೆ ಎಂಬ ನೋವು ನಮಗಿದೆ ಆದರೆ ಇದು ಸಹಜ ಪ್ರಕ್ರಿಯೆ ಅವರ ಮುಂದಿನ ಜೀವನ ನೆಮ್ಮದಿಯಿಂದ ಕೂಡಿರಲೆಂದು ಆಡಳಿತ ಮಂಡಳಿ ಪರವಾಗಿ ಹಾರೈಸುತ್ತೇನೆ ಎಂದರು. ಸಿಬ್ಬಂದಿ ಪ್ರವೀಣ ಪಾಟೀಲ ಮಾತನಾಡಿ ಗೌಡಗೇರಿ ಅವರು ಸರಳ ವ್ಯಕ್ತಿತ್ವದ ಸ್ನೇಹಜೀವಿಯಾಗಿದ್ದಾರೆ ಅವರು ಸಿಬ್ಬಂದಿ ವರ್ಗದವರೊಂದಿಗೆ ಉತ್ತಮ ಬಾಂಧವ್ಯವನ್ನಿಟ್ಟು ತಮ್ಮ ಅಪಾರ ಅನುಭವದ ಮೂಲಕ ನಮಗೆಲ್ಲರಿಗೂ ಮಾರ್ಗದರ್ಶನ ಮಾಡುತ್ತಿದ್ದರು. ಅವರ ಈ ಉತ್ತಮ ಆದರ್ಶವನ್ನು ನಾವು ಮುಂದೆಯೂ ಅನುಸರಿಸುತ್ತೇವೆ ಎಂದರು.

ಸೇವಾ ನಿವೃತ್ತ ಉಮರಸಿಂಗ್ ಗೌಡಗೇರಿ ಇವರಿಗೆ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗದಿಂದ ತಲಾ 5 ಗ್ರಾಮ ಚಿನ್ನದ ಉಂಗುರವನ್ನು ಹಾಕಿ ಕುಟುಂಬ ಸಮೇತ ಸನ್ಮಾನಿಸಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ಸ್ಥಳೀಯ ರಜಪೂತ ಸಮಾಜ, ಶ್ರೀರಾಮ ನವಮಿ ಉತ್ಸವ ಸಮಿತಿ ಹಾಗೂ ವಿವಿಧ ಸಂಘ-ಸಂಸ್ಥೆಗಳಿಂದ ಗೌಡಗೇರಿ ಇವರನ್ನು ಸನ್ಮಾನಿಸಲಾಯಿತು. ಸಹಕಾರಿ ಸಂಘದ ಅಧ್ಯಕ್ಷ ಗುರುಸಂಗಪ್ಪ ಕಶಟ್ಟಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಯಮನಪ್ಪ ಬರದೇನಾಳ,ಡಿಸಿಸಿ ಬ್ಯಾಂಕ್ ವ್ಯವಸ್ಥಾಪಕ ಆರ್.ಜಿ. ಹಿರೂರ, ಆಡಳಿತ ಮಂಡಳಿ ನಿರ್ದೇಶಕರಾದ ಎಸ್.ಬಿ. ಇಲಕಲ್,ಡಿ.ವಿ.ಪಾಟೀಲ,ಬಿ. ಎಂ.ಕುಂಬಾರ,ಬಿ.ವಿ.ಮಾಲಿಪಾಟೀಲ,ಡಿ. ಎಂ.ಕೆಂಭಾವಿ,ಎನ್.ಜಿ.ಗೊಟಗುಣಕಿ, ಎಂ.ಬಿ. ಕಟ್ಟಿಮನಿ, ಎಸ್.ಬಿ.ಬಿರಾದಾರ, ಸರೋಜಾಸಿ.ದೇಸಾಯಿ,ಜ್ಯೋತಿಡಿ.ಹಜೇರಿ, ಸಂಘದ ಕಾರ್ಯನಿರ್ವಹಣಾಧಿಕಾರಿ ಶಂಕರಗೌಡ ಪಾಟೀಲ,ಸಿಬ್ಬಂದಿಗಳಾದ ಎಂ.ಸಿ. ಪಾಲ್ಕಿ, ಎಂ.ಜಿ.ಪಾಟೀಲ, ಎಸ್. ಎಂ.ಬಿರಾದಾರ, ಎಸ್.ಸಿ.ಹಿಪ್ಪರಗಿ, ಆರ್.ಬಿ.ಪಾಟೀಲ,ಆರ್.ಬಿ.ಕಟ್ಟಿಮನಿ ಹಾಗೂ ಸಂಘದ ಸದಸ್ಯರು ಮತ್ತಿತರರು ಇದ್ದರು.

## ಮುದ್ದೇಬಿಹಾಳ ಗ್ರಾಮದೇವತೆ ಜಾತ್ರಾ ಮಹೋತ್ಸವ ಅದ್ದೂರಿ ಮೆರವಣಿಗೆ



**ಮುದ್ದೇಬಿಹಾಳ :** ಎಲ್ಲ ಜಾತಿಯ ಧರ್ಮ ಗುರುಗಳೊಂದಿಗೆ ಅದ್ದೂರಿ ಜಾತ್ರಾ ಮೆರವಣಿಗೆ ಜರುಗಿತು.

ಈ ಮೆರವಣಿಗೆಯಲ್ಲಿ ಎಲ್ಲಾ ಮುಸ್ಲಿಂ ಬಾಂಧವರು ಧಾರ್ಮಿಕ ಗುರುಗಳು ಈ ಜಾತ್ರೆಯಲ್ಲಿ ಹಿಂದೂ ಮುಸ್ಲಿಂ ಎಲ್ಲರೂ ಕೈ ಜೋಡಿಸಿ ಮೆರವಣಿಗೆ ಯಲ್ಲಿ ಭಾಗಿಯಾಗಿ ನಾವು ಒಂದಾಗಿ ಇದೀವಿ ಎಲ್ಲಾ ಹಬ್ಬ ಒಂದಾಗಿ ನಾವು ಆಚರಿಸ್ತೀವಿ ಬೇದ ಬಾವ ಮಾಡಿಲ್ಲ ಒಂದೊಂದು ಕಡೆ ರಾಜಕೀಯವಾಗಿ ಭೇದಭಾವ ಮಾಡುತ್ತಿದ್ದಾರೆ ಇದು ನಮ್ಮ ತಾಲೂಕು ದಲ್ಲಿ ಯಾವದೇ ಕಾರಣಕ್ಕೆ ಭೇದಭಾವ ಇಲ್ಲ ಇಲ್ಲೇ ನಮ್ ಮುದ್ದೇಬಿಹಾಳದಲ್ಲಿ ಒಂದಾಗಿದ್ದೀವಿ ಎಲ್ಲಾ ಮಸೂತಿಗಳಿಗೆ ಲೈಟಿಂಗ್ ಮಾಡಿದ್ದಾರೆ ನಾವು ಅದ-ಕ್ಕೆ ಸಹಕಾರ ಕೊಟ್ಟಿದ್ದೇವೆ ಈ ಮೆರವಣಿಗೆಯಲ್ಲಿ ಊರಿನ ಹಿರಿಯರು ಹಾಗು ಮುಸ್ಲಿಂ ಮುಖಂಡರು ಭಾಗವಹಿಸಿದ್ದರು ಯಾವುದೇ ಕಾರಣಕ್ಕೂ ಬೇರೆ ಆಗುವುದಿಲ್ಲ ಎಲ್ಲಾ ಹಬ್ಬವನ್ನು ನಾವು ಒಂದಾಗಿ ಮಾಡ್ಕೊಂತ ಬಂದಿದ್ದೇವೆ.

ಈ ಸಂದರ್ಭದಲ್ಲಿ ಮಾತನಾಡಿದ್ದಾರೆ ಪುರಸಭೆ ಅಧ್ಯಕ್ಷ ಮಹಿಬೂಬ ಗೊಳಸಂಗಿ ಕರ್ನಾಟಕ ಬ್ಯಾಂಕ್ ಮಾಜಿ ಅಧ್ಯಕ್ಷ ಸತೀಶ್ .ಓಶ್ವಾಲ್ ಎಲ್ಲಾ ಧರ್ಮದವರು ಸಹಕರಿಸುತ್ತಾರೆ ಯಾರಾದರೂ ಏನಾದರು ಸಲಹೆ ನೀಡಿದರೆ ಕಮೀಟಿ ಗಂಭೀರವಾಗಿ ತೆಗೆದು-ಕೊಂಡ ಮುಂದೆವರಿಯುತೇವೆ ಎಂದರು ಪ್ರಭುರಾಜ್ ಕಲಬುರ್ಗಿ ಮಾತನಾಡಿ ಗ್ರಾಮ ದೇವತೆ ಜಾತ್ರೆ ಯನ್ನ ಯಾವುದೇ ಕುಂದು ಕೂರೆತೆ ಬಾರದಂತೆ ನೋಡೀಕೋಳ್ಳಲು ಅನೇಕ ಜನರಿಗೆ ಜವಾಬ್ದಾರಿಯನ್ನು ನೀಡಲಾಗಿದೆ ಅವರು ಮಾಡುತ್ತಾರೆ ಇವರು ಮಾಡುತ್ತಾರೆ ಎಂದು ಅನ್ನದೆ ನಮ್ಮೂರಿನ ಜಾತ್ರೆಯನ್ನು ಎಲ್ಲರೂ ವಿಜೃಂಭಣೆಯಿಂದ ಮಾಡೂಣ ಎಂದರು ಪುರಸಭೆ ಅಧ್ಯಕ್ಷರಾದ ಮಹಿಬೂಬ.ಗೂಳಸಂಗಿ ಮಾಂತು ಭೂದಿಹಳಮಠ ಕಾಮರಾಜ್ ಬಿರಾದಾರ ಸಿಕಂದರ್ ಜಾನೇಕರ್ ರಾಜು ರಾಯಗೊಂಡ . ಸಿ. ಜಿ. ವಿಜಯಕರ್ ರಫೀಕ್.ಶಿರೋಳ ಶಶಿಕಾಂತ್ ಮಾಲಗತ್ತಿ ಸದ್ದಾಂ ಕುಂಟೋಜಿ ಮಾಂತೇಶ್ ಬಿಜ್ಜೂರ. ಸದು. ಮಠ. ಹುಸೇನ್ ಮುಲ್ಲಾ ಉದಯ ರಾಯಚೂರು ಸಂಗನಗೌಡ ಬಿರಾದಾರ ಜಿಟಿಸಿ.ಕೀರಣ. ಪಾಟೀಲ್ ಶ್ರೀ ಕಾಂತ . ಹಿರೇಮಠ .ಭರತ್ ಬೋಸ್ಲೇ ಸಿ. ಪಿ. ಸಜ್ಜನ್ ಸುದೀರ್ ನಾವದಗಿ. ಬಾಬು ಬಿರಾದಾರ ನಾಗಭೂಷಣ .ನಾವದಗಿ ಇನ್ನಿತರರು ಇದ್ದರು.

# ಕಠಿಣ ಪರಿಶ್ರಮದಿಂದ ಸಾಧನೆ ಸಾಧ್ಯ: ಶಿವಶಂಕರ ಸ್ವಾಮಿಜಿ

**ಮಹಾಲಿಂಗಪುರ :** ಕಠಿಣ ಪರಿಶ್ರಮದ ಮೂಲಕ ಮುನ್ನುಗ್ಗಿದರೆ ಎಂತಹ ಸಾಧನೆಯನ್ನಾದರೂ ಸಾಧಿಸಬಹುದು ಎಂದು ಹುಬ್ಬಳ್ಳಿ ವೀರಭಿಕ್ಷಾವರ್ತಿ ನೀಲಕಂಠ ಮಠದ 1008 ಜಗದ್ಗುರು ಶಿವಶಂಕರ ಶಿವಾಚಾರ್ಯ ಸ್ವಾಮಿಜಿ ಹೇಳಿದರು.

ಅವರು ಇಲ್ಲಿನ ನೀಲಕಂಠೇಶ್ವರ ದೇವಸ್ಥಾನದಲ್ಲಿ ಕುರುಹಿನಶೆಟ್ಟಿ ಯುವ ವೇದಿಕೆಯಿಂದ ಎಸ್.ಎಸ್.ಎಲ್.ಸಿ. ಮತ್ತು ಪಿಯುಸಿ ಪರೀಕ್ಷೆಯಲ್ಲಿ ಸಾಧನೆ ಮಾಡಿದ ನೇಕಾರ ಸಮಾಜದ ವಿದ್ಯಾರ್ಥಿಗಳ ಸನ್ಮಾನ ಸಮಾರಂಭದ ಸಾನಿಧ್ಯ ವಹಿಸಿ ಮಾತನಾಡಿದರು. ನೇಕಾರ ಸಮಾಜದ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ

ಮಾಡಿದ್ದು ಸಂತೋಷದ ಸಂಗತಿ. ವಿದ್ಯಾರ್ಥಿಗಳು ಉನ್ನತ ಗುರಿಯೊಂದಿಗೆ ಭವಿಷ್ಯದ ಶೈಕ್ಷಣಿಕ ಜೀವನದಲ್ಲಿ ಯಶಸ್ವಿಯಾಗಿರಿ ಎಂದರು.

ಬಸವಾನಂದ ಪ್ರೌಢ ಶಾಲೆಯ ಮುಖ್ಯ ಶಿಕ್ಷಕ ಎಸ್. ಕೆ. ಗಿಂಡೆ ಮಾತನಾಡಿ ಕಣ್ಣಿಗೆ ಕಾಣುವ ನಿಜವಾದ ದೇವರು ಎಂದರೆ ತಂದೆ-ತಾಯಿ. ಯಾವ ಮಕ್ಕಳೂ ಹೆತ್ತವರಿಗೆ ನೋವು ನೀಡದಂತೆ ಶ್ರದ್ಧಾ, ಭಕ್ತಿಯಿಂದ ಕಠಿಣ ಪರಿಶ್ರಮದ ಮೂಲಕ ವಿದ್ಯಾಭ್ಯಾಸ ಮಾಡಿ ಜೀವನದಲ್ಲಿ ಯಶಸ್ವಿಯಾಗಬೇಕು ಎಂದರು.

ಯುವ ವೇದಿಕೆ ಅಧ್ಯಕ್ಷ ರವಿ ಮುಂಡಗನೂರ, ಸಮಾಜದಹಿರಿಯರಾದಎಂ.ಎಸ್.ಮುಗಳಖೋಡ, ಹೊಳೆಪ್ಪ ಬಾಡಗಿ, ಮನೋಹರ ಶಿರೋಳ, ಈರಪ್ಪ ಬೆಟಗೇರಿ, ಮಹೇಶ ಜಿಡ್ಡಿಮನಿ, ಅಡಿವೆಪ್ಪ ಹುಣಶ್ಯಾಳ, ಪ್ರಕಾಶ ಬಿಲಕುಂದಿ, ಚನ್ನಪ್ಪ ಹುಣಶ್ಯಾಳ, ಮುತ್ತಪ್ಪ ಧವಳೇಶ್ವರ, ಶ್ರೀಶೈಲ ಬಿಸನಕೊಪ್ಪ, ಶಂಕರ ಯಾದವಾಡ, ಮಹಾಲಿಂಗ ಕೆಳಗಿನಮನಿ, ಸದಾಶಿವ ಬರಗಿ, ರಾಜೇಂದ್ರ ಮಿರ್ಜಿ, ವೀರಭದ್ರ ಮುಗಳ್ಯಾಳ, ಗಿರಿಮಲ್ಲಪ್ಪ ಯರಗಟ್ಟಿ ಸೇರಿದಂತೆ ಇನ್ನೂ ಹಲವರು ಹಾಜರಿದ್ದರು.

ಶ್ರೀಶೈಲ ಬಾಳಿಗಿಡದ ಸ್ವಾಗತಿಸಿದರು. ಚನ್ನಬಸು ಹುಣಶ್ಯಾಳ ನಿರೂಪಿಸಿ ವಂದಿಸಿದರು.

# ಮರಾಠಿ ಭಾಷಿಕ ಹಳೆಯ ವಿದ್ಯಾರ್ಥಿಗಳಿಂದ ಗುರವಂದನಾ ಸಮಾರಂಭ

**ಜಮಖಂಡಿ :** ನಗರದ ಸರಕಾರಿ ಪರಶುರಾಮಭಾವು ಪ್ರೌಢಶಾಲೆಯ ಸಭಾ ಭವನದಲ್ಲಿ ಗುರುವಂದನಾ ಮತ್ತು ಮರಾಠಿ ಭಾಷಿಕ ಹಳೆಯ ವಿದ್ಯಾರ್ಥಿಗಳ ಭಾವನಾತ್ಮಕ ಸ್ನೇಹಸಮ್ಮೇಳನ ನಡೆಯಿತು.

ಸನ್ 1997-98 ನೇ ಸಾಲಿನಲ್ಲಿ ಮರಾಠಿ ಭಾಷೆಯಲ್ಲಿ ಶಿಕ್ಷಣ ಪಡೆದ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಂದ ಕಳೆದ 27 ವರ್ಷದ ನಂತರ ಶಿಕ್ಷಕರಿಗೆ ಗುರುವಂದನೆ

ಸಲ್ಲಿಸುವ ಮೂಲಕ ಅರ್ಥ-ಪೂರ್ಣವಾಗಿ ಸ್ನೇಹ ಸಮ್ಮೇಳನವನ್ನು ಆಚರಿಸಿದರು.



ನಿವೃತ್ತ ಶಿಕ್ಷಕರಾದ ಎನ್. ಕೆ. ಕುಲಕರ್ಣಿ, ಜಹೀರಾ ಬಾಗವಾನ ಸಹಿತ ಹಲವರಿಗೆ ಗುರುವಂದನೆ ಸಲ್ಲಿಸಲಾಯಿತು. ಮುಖ್ಯಅತಿಥಿಗಳಾಗಿ ಹಿರಿಯ ಸಾಹಿತಿ, ನ್ಯಾಯವಾದಿ ತಾತಾಸಾಹೇಬ ಬಾಂಗಿ, ಸುರೇಶ ಭೋಸಲೆ, ಪ್ರಕಾಶ ಅರಕೇರಿ ಭಾಗವಹಿಸಿದ್ದರು.

ಹಳೆಯ ವಿದ್ಯಾರ್ಥಿಗಳಾದ ಸಂಪದಾ ಚಿಗರಿ, ನೂತನ ಭೋಸಲೆ,ಅಶ್ವಿನಿಪತಂಗೆ,ಸುನೀಲ ಶಿಂಧೆ,ಗುರುಬಕ್ಷಧರ್ಮದಾಸಾನಿ, ದೀಪಕ ಸಾಳುಂಕೆ, ವಿಜಯ ಜಾಧವ, ಹುಸೇನ ಶೇಖ, ಪ್ರದೀಪ ಗಣಾಚಾರಿ,

ಸಂದೀಪ ಝಾಡ, ಪ್ರಶಾಂತ ನಲಗೆ ಸಹಿತ ಹಲವಾರು ವಿದ್ಯಾರ್ಥಿಗಳು ಭಾಗವಹಿಸುವ ಮೂಲಕ ಆಯೋಜಿಸಲಾಗಿದ್ದ ಮನರಂಜನೆ, ಕ್ರೀಡೆಗಳಲ್ಲಿ ಪಾಲ್ಗೊಂಡಿದ್ದರು. ಶಾಲೆಯಲ್ಲಿ ನಡೆದ ಹಿಂದಿನ ಮನೋರಂಜಕ ಘಟನೆಗಳನ್ನು ನೆನಪಿಸಿಕೊಂಡು ಸಂಭ್ರಮಿಸಿದರು.

# ಗೋಶಾಲೆಯಲ್ಲಿ ಸ್ವಚ್ಛತಾ ಕಾರ್ಯ

## ಗೋವುಗಳ ಸೇವೆಮಾಡಿ ಪುಣ್ಯ ಸಂಪಾದಿಸಿರಿ: ರವಿ ಜವಳಗಿ

**ಮಹಾಲಿಂಗಪುರ:** ಸನಾತನ ಹಿಂದೂ ಧರ್ಮದಲ್ಲಿ ಗೋವುಗಳಿಗೆ ವಿಶೇಷ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಯುವಕರುಗೋವುಗಳಸೇವೆಯನ್ನು ಮಾಡಿ ಪುಣ್ಯ ಸಂಪಾದನೆಯ ಜೊತೆಗೆ ಹಲವು ರೋಗಗಳಿಂದಲೂ ಮುಕ್ತರಾಗಬಹುದುಎಂದುಪುರಸಭೆ ಸದಸ್ಯ, ಹಿಂದೂ ಸಂಘಟನೆಗಳ ಮುಖಂಡ ರವಿ ಜವಳಗಿ ಹೇಳಿದರು.



ಮಂಗಳವಾರ ಪಟ್ಟಣದ ಭಜರಂಗದಳ ಹಾಗೂ ಹಿಂದೂ ಸಂಘಟನೆಗಳ ಒಕ್ಕೂಟದ ವತಿಯಿಂದ ಮಹಾಲಿಂಗೇಶ್ವರ ಗೋಶಾಲೆಯಲ್ಲಿ ಹಮ್ಮಿಕೊಂಡಿದ್ದ ಸ್ವಚ್ಛತಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು,ಗೋಮಾತೆಯನ್ನುಮನೆಯಲ್ಲಿ ಸಾಕುವುದ-ರಿಂದ ಹಲವು ಪ್ರಯೋಜನಗಳಿವೆ. ಧಾರ್ಮಿಕ ನಂಬಿಕೆಗಳ ಪ್ರಕಾರ ಗೋಮಾತೆಯ ಹೊಟ್ಟೆಯಲ್ಲಿ 33 ಕೋಟಿ ದೇವತೆಗಳು ನೆಲೆಸಿದ್ದಾರೆ ಎಂಬ ನಂಬಿಕೆ ಇದ್ದು, ಯುವಕರು ದುಶ್ಚಟಗಳಿಗೆ ಬಲಿಯಾಗದೇ ಗೋ ಸೇವೆ, ದೇವತಾರಾಧನೆ, ನಾಮ ಜಪ ಸೇರಿದಂತೆ ಸತ್ಸಂಗ ಮತ್ತು ಸಾಮಾಜಿಕ ಸೇವಾ ಕಾರ್ಯಗಳ ಮೂಲಕ ದುಶ್ಚಟ ಮುಕ್ತ ನವ ಸಮಾಜ ನಿರ್ಮಾಣಕ್ಕೆ ಶ್ರಮಿಸಬೇಕು ಎಂದರು.

ಹಿಂದೂ ಸಂಘಟನೆಗಳ ಕಾರ್ಯಕರ್ತರಾದ ಶ್ರೀನಿಧಿ ಕುಲಕರ್ಣಿ, ಬಸವರಾಜ ಮುರಾರಿ ಮಾತನಾಡಿ ನಮ್ಮ ಹಿಂದೂ ಸಂಘಟನೆಗಳ ಒಕ್ಕೂಟದಿಂದ ಕಳೆದ ಹತ್ತಾರು ವರ್ಷಗಳಿಂದ ನಿರಂತರವಾಗಿ ಗೋಶಾಲೆ, ಕೆರೆ, ಶಾಲಾ ಆವರಣ, ದೇವಸ್ಥಾನ, ಸ್ಮಶಾನಗಳ ಸ್ವಚ್ಛತಾ ಕಾರ್ಯವನ್ನು ಮಾಡುತ್ತಾ ಬಂದಿದ್ದೇವೆ. ಕಾರಣಾಂತರಗಳಿಂದ ಕಳೆದ ಐದಾರು ತಿಂಗಳಿನಿಂದ ನಮ್ಮ ಸೇವಾ ಕಾರ್ಯ ಸ್ಥಗಿತಗೊಳಿಸಲಾಗಿತ್ತು. ಈಗ ಪುನಃ ಪ್ರಾರಂಭಿಸಿದ್ದೇವೆ. ಪ್ರತಿ ರವಿವಾರ ನಮ್ಮ ಸಂಘಟನೆಗಳ ಒಕ್ಕೂಟದಿಂದ ನಿರಂತರ ಸ್ವಚ್ಛತಾ ಸೇವಾ ಕಾರ್ಯ ಮುಂದುವರೆಯಲಿದೆ ಎಂದರು.

ಹಿಂದೂ ಸಂಘಟನೆಗಳ ಕಾರ್ಯಕರ್ತರಾದ ಅಭಿಷೇಕ ಲಮಾಣಿ, ರಾಘವೇಂದ್ರ ಪವಾರ, ಅರ್ಜುನ ಪವಾರ, ರಾಘವೇಂದ್ರ ಶಿರೋಳ, ಅನಿಲ ಖವಾಸಿ, ಹಣಮಂತ ನಾವ್ಹಿ, ವಿಶಾಲ ಪತ್ತಾರ, ರಾಜೇಂದ್ರ ನಾವ್ಹಿ, ದಾನೇಶ ಡೊಂಬರ, ಪತ್ರಕರ್ತ ಚಂದ್ರಶೇಖರ ಮೋರೆ ಸೇರಿದಂತೆ ಹಲವರು ಗೋ ಶಾಲೆಯ ಸ್ವಚ್ಛತಾ ಕಾರ್ಯದಲ್ಲಿ ಭಾಗವಹಿಸಿದ್ದರು.

**ಖಾಕಿಯೊಳಗಿನ ಸಾಹಿತಿ ವಿಜಯಪುರ ಡಿವೈಎಸ್ಪಿ ಬಸವರಾಜ ಯಲಿಗಾರ | ಯುವ ನ್ಯಾಯವಾದಿ ಮಹ್ಮದಗೌಸ ಹವಾಲ್ದಾರ**

# ನ್ಯಾಯವಾದಿ ಮಹ್ಮದಗೌಸ ಹವಾಲ್ದಾರರಿಂದ ಡಿವೈಎಸ್ಪಿ ಅವರಿಗೆ ಸನ್ಮಾನ

**ವರದಿ : ಲಾಲಸಾಬ ಸವಾರಗೋಳ**

**ವಿಜಯಪುರ :** ಜಿಲ್ಲೆಯ ಡಿವೈಎಸ್ಪಿ ಆಗಿರುವ ಬಸವರಾಜ ಯಲಿಗಾರ ಅವರು "ನನ್ನೊಳಗಿನ ನಾನು ನೀನೆ" ಎಂಬ ಕೃತಿಯನ್ನು ಬರೆಯುವುದರ ಮೂಲಕ 959 ಬಸವಣ್ಣನವರ ವಚನಗಳನ್ನು ಇಂಗ್ಲಿಷ್ ಭಾಷೆಗೆ ಭಾಷಾಂತರಿಸಿದಕ್ಕಾಗಿ ನ್ಯಾಯವಾದಿ ಮಹ್ಮದಗೌಸ ಹವಾಲ್ದಾರ ಅವರು ಡಿವೈ-ಎಸ್ಪಿ ಅವರ ಕಛೇರಿಗೆ ಭೇಟಿಯಾಗಿ ಕೆಲವು ಸಾಹಿತ್ಯಕ ವಿಷಯಗಳ ಕುರಿತು ಚರ್ಚಿಸಿ ಸನ್ಮಾನಿಸಿದರು. ಈ ವೇಳೆ ಯುವ ನ್ಯಾಯವಾದಿ ಮಹ್ಮದಗೌಸ ಮಾತನಾಡಿ ಡಿವೈಎಸ್ಪಿ ಬಸವರಾಜ ಎಲಿಗಾರ ಅವರಿಗೆ ಸನ್ಮಾನಿಸಿ ಅಭಿನಂದಿಸುತ್ತಾ, ಬಸವರಾಜ ಎಲಿಗಾರ ಅವರು "ನನ್ನೊಳಗಿನ ನಾನು ನೀನೆ" ಎಂಬ ಕೃತಿಯನ್ನು ಬರೆಯುವದರ ಮೂಲಕ 959 ಬಸವಣ್ಣವರ ವಚನಗಳನ್ನು ಇಂಗ್ಲಿಷ್ ಭಾಷೆಗೆ ಭಾಷಾಂತರಿಸುವದರ



ಮೂಲಕ ಬಸವಾಭಿಮಾನ ಮೆರೆದಿದ್ದಕ್ಕಾಗಿ ಎಲ್ಲಬಸವಾಭಿಮಾನಿಗಳಪರವಾಗಿಅವರಿಗೆ ಅನಂತಕೋಟಿ ಶರಣು ಶರಣಾರ್ಥಿಗಳನ್ನು ನ್ಯಾಯವಾದಿ ಮಹ್ಮದಗೌಸ ಹವಾಲ್ದಾರ ಅವರು ಸಲ್ಲಿಸಿದರು,

ಇದೆ ಸಂದರ್ಭದಲ್ಲಿ ನಿಮ್ಮಿಂದ ಇನ್ನು ಹತ್ತು ಹಲವು ಕೃತಿಗಳು ಕನ್ನಡ ಸಾರಸ್ವತ ಲೋಕಕ್ಕೆ ಬರಲಿ ಎಂದು ಬಸವರಾಜ ಎಲಿಗಾರ ಅವ-ರಿಗೆ ಶುಭ ಹಾರೈಸಿದರು.

ಬಿಡುವಿಲ್ಲದ ಇಲಾಖೆ ಪೋಲೀಸ್ ಇಲಾಖೆ ಇಂತಹ ಬಿಡುವಿಲ್ಲದ ಸಮಯದಲ್ಲೂ ಬಿಡುವು ಮಾಡಿಕೊಂಡು ಹಲವಾರು ವಚನಗಳು ಆಂಗ್ಲ ಭಾಷೆಗೆ ಭಾಷಾಂತರಿಸಿ ಅವುಗಳ ವಿವರಣೆ ಸಹಿತ ಬರೆದಿರುವದು ಗಮನಾರ್ಹ ನಿಜವಾಗಲೂ ಇವರ ಕಾರ್ಯ ಶ್ಲಾಘನಿಯ, ಬಸವಣ್ಣವರ ವಚನಗಳು ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿರದೆ ರಾಷ್ಟ್ರೀಯ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪರಿಚಯ ಮಾಡುವದು ಇವರ ಉದ್ದೇಶವಾಗಿದೆ, ಪ್ರಸ್ತುತ ಸಮಾಜಕ್ಕೆ ಬಸವಾದಿ ಶರಣ-ರ ವಚನಗಳು ಅತ್ಯವಶ್ಯಕವಾಗಿದ್ದು ಅವುಗಳನ್ನು ಸರಳವಾಗಿ ಆಂಗ್ಲ ಭಾಷೆಗೆ ಭಾಷಾಂತರಿಸಿ ಎಲ್ಲರೂ ಓದುವಂತಾಗಲಿ ಎನ್ನುವದು ಇವರ ಆಶಯವಾಗಿದೆ ಎಂದು ಹೇಳಿದರು.



**ಬಾಗಲಕೋಟೆ : ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಅವರು ನವನಗರದ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ, ಕೋವಿಡ್-19 ಮುಂಜಾಗ್ರತವಾಗಿ ಕೈಗೊಂಡಿರುವ ಕ್ರಮಗಳ ಕುರಿತು ಪರಿಶೀಲನೆ ಮಾಡಿದರು. ಈ ಸಂದರ್ಭದಲ್ಲಿ ಹಾವು ಕಚ್ಚಿ ಆಸ್ಪತ್ರೆಯಲ್ಲಿ ದಾಖಲಾಗಿರುವ ರೋಗಿಗಳ ಆರೋಗ್ಯವನ್ನು ವಿಚಾರಿಸಿದರು. ಭೇಟಿ ಸಮಯದಲ್ಲಿ ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಮಹೇಶ ಕೋಣಿ, ಡಾ.ಗಿರೀಶ ಸಂಗಮ ಇದ್ದರು.**

# ಕನ್ನಡ ನಾಟಕಗಳ ವಿಭಿನ್ನ ನೆಲೆಗಳು : ಒಂದು ದಿನದ ರಾಜ್ಯಮಟ್ಟದ ಸಂಶೋಧನಾ ಕಮ್ಮಟ

# ಗ್ರಾಮೀಣ ಸೊಗಡೆ ಕನ್ನಡ ನಾಟಕಗಳ ಜೀವಾಳ: ಡಾ.ವೀರೇಶ ಬಡಿಗೇರ

**ಬಾಗಲಕೋಟೆ:** ಜಾನಪದಹಾಗೂಶಾಸ್ತ್ರೀಯ ಕಾವ್ಯ ಕೃತಿಗಳನ್ನು ಮರು ವಾಖ್ಯಾನಿಸಿ, ವಿಭಿನ್ನವಾಗಿ ಕಟ್ಟಿಕೊಡುವ ವಿಶಿಷ್ಟಸಾಮರ್ಥ್ಯ ಕನ್ನಡ ಕವಿಗಳಿಗೆ ಮಾತ್ರ ದಕ್ಕಿದ್ದು, ಆ ಪರಂಪರೆಯ ಮುಂದುವರಿಕೆಯಾಗಿ ನಾವು ಕನ್ನಡ ನಾಟಕಗಳ ಬೆಳೆದು ಬಂದ ಬಗೆಯಲ್ಲಿ ಕಂಡುಕೊಳ್ಳಬಹುದಾಗಿದೆ, ಗ್ರಾಮೀಣ ಸೊಗಡೆ ಕನ್ನಡ ನಾಟಕಗಳ ಜೀವಾಳವಾಗಿದೆ ಎಂದು ಹಂಪಿ ವಿಶ್ವವಿದ್ಯಾಲಯದ ಹಸ್ತಪ್ರತಿ ಹಾಗೂ ನಾಟಕ ವಿಭಾಗದ ಮುಖ್ಯಸ್ಥರಾದ ಡಾ.ವೀರೇಶ ಬಡಿಗೇರ ಹೇಳಿದರು.



ಅವರು ನವನಗರದಲ್ಲಿರುವ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ಮಂಗಳವಾರಹಂಪಿಕನ್ನಡವಿಶ್ವವಿದ್ಯಾಲಯ ನಾಟಕ ವಿಭಾಗ, ಗುಳೆದಗುಡ್ಡದ ರಾಷ್ಟ್ರೀಯ ಸಂಶೋಧನಾ ವೇದಿಕೆ, ಇವರುಗಳ ಸಹಯೋಗದಲ್ಲಿ "ಕನ್ನಡ ನಾಟಕಗಳ ವಿಭಿನ್ನ ನೆಲೆಗಳು" ಕುರಿತು ಒಂದು ದಿನದ ರಾಜ್ಯಮಟ್ಟದ ಸಂಶೋಧನಾ ಕಮ್ಮಟವನ್ನು ಸಸಿಗೆ ನಿರುಣಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು ಕನ್ನಡ ನಾಟಕಗಳ ಕಥಾವಸ್ತುವಿಗೆ ಮೂಲ ಬೇರು ಸಿಗುವುದು ನಮ್ಮ ಗ್ರಾಮೀಣ ಭಾಗದ ಜನ ಸಮುದಾಯದ ನಿತ್ಯದ ಸಂಹವನ, ಸಂಭಾಷಣೆ, ಹಾವ ಭಾವಗಳ ಅನುಕರಣೆ ಮೂಲಕ ನೆಲೆ ಕಂಡುಕೊಂಡದ್ದಾಗಿದೆ, ಈ ನಿಟ್ಟಿನಲ್ಲಿ ಗಂಭೀರವಾಗಿ ಆಲೋಚಿಸಿದಾಗ ಕನ್ನಡ ನಾಟಕ ಕ್ಷೇತ್ರಕ್ಕೆ ಸಂಬಂದಿಸಿದಂತೆ ನಟನೆ ಮತ್ತು ಅಭಿನಯಕ್ಕೆ ಸೂಕ್ಷ್ಮವಾದ ವ್ಯತ್ಯಾಸವನ್ನು ಗುರುತಿಸಬಹುದಾಗಿದೆ, ಒಬ್ಬರು ಹೇಳಿದಂತೆ ನಟಿಸುವುದು ನಟನೆಯಾದರೆ, ಅನುಭವಿಸಿ ಅಭಿವ್ಯಕ್ತಿಸುವುದು ಅಭಿನಯವಾಗಿದೆ, ಅಭಿನಯದ ಮೂಲಕ ಅಭಿವ್ಯಕ್ತಿಗೊಂಡ ಕಲೆಯೇನಾಟಕವೆನಿಸಿಕೊಳ್ಳುತ್ತದೆಎಂದರು.

ರಾಷ್ಟ್ರೀಯ ಸಂಶೋಧನಾ ವೇದಿಕೆಯ ಗೌರವಾಧ್ಯಕ್ಷರಾದ ಡಾ.ಸಂಗಮೇಶ ಕಲ್ಯಾಣಿ ಅವರು ಮುಖ್ಯ ಅತಿಥಿಗಳಾಗಿ ಮಾತನಾಡಿ ಸಮಾಜದ ಏರುಪೇರುಗಳನ್ನು ತಿದ್ದುವ, ತಿಳುವಳಿಕೆ ನೀಡುವ, ಅರಿವು ಮೂಡಿಸೂವ ವಿಷಯಗಳ ಮೇಲೆ ನಾಟಕ ರಚನೆ, ಅಭಿನಯ, ಅನುಭವಗಳ ಮಾತು ಎಲ್ಲವೂ ಬೇಕಾಗುತ್ತದೆ. ಹಳಗನ್ನಡದ ಚಂಪೂ ಕಾವ್ಯಗಳನ್ನು ಓದಿದರೆ ಹತ್ತಾರು ಕನ್ನಡ ನಾಟಕಗಳನ್ನು ಬರೆಯಬಹುದು, ನಾಟಕ ರಚನೆಯಲ್ಲಿ ಹೆಚ್ಚು ಅನುಭವ ಮುಖ್ಯವಾಗುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ ಕಾಲೇಜಿನ ಪ್ರಾಚಾರ್ಯರಾದ ಡಾ. ಅರುಣಕುಮಾರ ಗಾಳಿ ಮಾತನಾಡಿ, ಕನ್ನಡ ನಾಟಕ ಪರಂಪರೆ ಶ್ರೀಮಂತವಾಗಿದೆ. ನಮ್ಮ ನವನಗರ ಕಾಲೇಜಿನಲ್ಲಿ ಆಯೋಜಿಸಿದ ರಾಜ್ಯಮಟ್ಟದ ಸಂಶೋಧನಾ ಕಮ್ಮಟದ ವಿಷಯವು ಪದವಿ ವಿದ್ಯಾರ್ಥಿಗಳಿಗೆ ಪಠ್ಯ ಇದ್ದ ಕಾರಣ ನಾಡಿನ ಅನೇಕ ಸಂಪನ್ಮೂಲ ವ್ಯಕ್ತಿಗಳನ್ನು ಆಮಂತ್ರಿಸಿ, ಕುವೆಂಪು ಅವರ ಶೂದ್ರ ತಪಸ್ವಿ, ಕಂಬಾರ ಅವರ ಶಿವರಾತ್ರಿ ಹಾಗೂ ಕಾರ್ನಾಡ ಅವರ ತಲೆದಂಡ ನಾಟಕಗಳ ವಸ್ತು ಅವುಗಳ ಮಹತ್ವ ತಿಳಿಸುವ ಉದ್ದೇಶವಾಗಿದೆ. ಇದ-ರಿಂದ ನಮ್ಮ ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಅನುಕೂಲವಾಗಿದೆ ಎಂದರು.

ಕನ್ನಡ ವಿಭಾದ ಸಹ ಪ್ರಾಧ್ಯಾಪಕರಾದ ಡಾ.ಜಿಜಿ.ಹಿರೇಮಠ ಪ್ರಸ್ತಾವಿಕ ಮಾತನಾಡಿ, ಕನ್ನಡ ನಾಟಕಗಳ ವಿಭಿನ್ನ ನೆಲೆಗಳ ಕು-ರಿತಾಗಿ ನಡೆದ ಸಂಶೋಧನಾ ಕಮ್ಮಟದ ಆಶಯಗಳನ್ನು ವಿವರವಾಗಿ ತಿಳಿಸಿದರು. ರಾಷ್ಟ್ರೀಯ ಸಂಶೋಧನಾ ವೇದಿಕೆಯ ಕಾರ್ಯದರ್ಶಿ ಡಾ.ಚಂದ್ರಶೇಖರ ಕಾಳನ್ನವರ ವೇದಿಕೆ ಮೇಲೆ ಉಪಸ್ಥಿತ-ರಿದ್ದರು.

ಗೋಷ್ಠಿ-1ರಲ್ಲಿ ಸಹಾಯಕ ಪ್ರಾಧ್ಯಾಪಕರಾದ ಡಾ.ಸದಾಶಿವ ದೊಡ್ಡಮನಿ ಅವರು ಕುವೆಂಪು ಅವರ ಶೂದ್ರ ತಪಸ್ವಿ ನಾಟಕ ಕುರಿತು ವಿಷಯ ಮಂಡನೆ ಮಾಡಿದರು, ಗದಗ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ.ಸಿದ್ಧಲಿಂಗೇಶ ಸಜ್ಜನಶೆಟ್ಟರ ಅವರು ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು.

ಗೋಷ್ಠಿ -2 ರಲ್ಲಿ ಯರಗಟ್ಟಿಯ ಸಿ.ಎಂ. ಮಾಮನಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ರಾಜಶೇಖರ ಬಿರಾದಾರ ಅವರು ಕಂಬಾರ ಅವರ ಶಿವರಾತ್ರಿ ನಾಟಕ ಕು-ರಿತು ವಿಷಯ ಮಂಡನೆ ಮಾಡಿದರು ರಂಗ ನಿರ್ದೇಶಕರಾದ ಪ್ರೊ.ಶ್ರೀಹರಿ ಧೂಪದ ಅವರು ಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದರು

ಗೋಷ್ಠಿ-3 ರಲ್ಲಿ ಧಾರವಾಡದ ಅಂಜುಮನ್ ಪದವಿ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ರುದ್ರೇಶ ಮೇಟಿ ಅವರು ಕಾರ್ನಡ ಅವರ ತಲೆದಂಡ ನಾಟಕ ಕುರಿತು ವಿಷಯ ಮಂಡನೆ ಮಾಡಿದರು. ಬೀಳಗಿಯ ಮಹಿಳಾ ಸಾಹಿತಿಗಳಾದ ಡಾ.ವಿಜಯಶ್ರೀ ಇಟ್ಟಣ್ಣವರ ಅವರು ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು.

ಸಂಶೋಧನಾ ಕಮ್ಮಟದಲ್ಲಿ ಸಾಹಿತ್ಯ ಅಕಾಡೆಮಿ ಸದಸ್ಯ ಮಹಾದೇವ ಬಸರಕೊಡ, ಸಾಹಿತಿ ಡಾ.ಸಣ್ಣವೀರಣ್ಣ ದೊಡ್ಡಮನಿ, ಸಿ.ಎನ್.ಬಾಳಕ್ಕನವರ, ಪಾಂಡುರಂಗ ಸಣ್ಣಪ್ಪನವರ, ಮಲ್ಲಿಕಾರ್ಜುನ ಸಜ್ಜನ, ಡಾ.ಮಲ್ಲಿಕಾರ್ಜುನ ಇಂಚಲ, ಡಾ.ಮೌನೇಶ ಕಮ್ಮಾರ, ಬಸವರಾಜ ಕುಂಬಾರ, ಡಾ.ವೀಣಾ ಕಲ್ಮಠ, ಸುನೀಲ ನಡಕಟ್ಟಿ, ಸಂಗಮೇಶ ಬ್ಯಾಳಿ, ಸಂಗಮೇಶ ಬಡಿಗೇರ ಸೇರಿದಂತೆ ವಿವಿಧ ಕಾಲೇಜುಗಳ ಉಪನ್ಯಾಸಕರು, ಹಾಗೂ ನವನಗರ ಕಾಲೇಜಿನ ಬೋಧಕರು, ಬೋಧಕೇತರ ವರ್ಗದವರು, ವಿದ್ಯಾರ್ಥಿಗಳು ಕಮ್ಮಟದಲ್ಲಿ ಪಾಲ್ಗೊಂಡಿದ್ದರು. ಸಾವಿತ್ರಿ ಮುತ್ತಗಿ ಪ್ರಾರ್ಥನೆ ಮಾಡಿದರು, ಪ್ರೊ.ಪರಸಪ್ಪ ತಳವಾರ ಸ್ವಾಗತಿಸಿದರು. ಡಾ.ಸುಮಂಗಲಾ ಮೇಟಿ ಕಾರ್ಯಕ್ರಮ ನಿರೂಪಿಸಿದರು.

# ಅನ್ನದಾನ ಶ್ರೇಷ್ಠ ದಾನಗಳಲ್ಲೊಂದು: ಪೌರಾಯುಕ್ತ ಜಗದೀಶ ಈಟಿ



**ರಬಕವಿ :** ಎಲ್ಲ ದಾನಗಳಲ್ಲಿ ಅನ್ನದಾನಕ್ಕೆ ಮಹತ್ತರ ಸ್ಥಾನವಿದೆ. ಅನ್ನ ಪರಬ್ರಹ್ಮ ಸ್ವರೂಪಿ ಎಂದು ವೇದಶಾಸ್ತ್ರಗಳು ಸ್ತುತಿಸಿದರೆ, ಶರಣರು ಕಾಯಕಕ್ಕೆ ಮೂಲಸ್ತೋತ್ರ ಅನ್ನವಾಗಿದ್ದು, ದಾಸೋಹ ಪರಂಪರೆ ಕಡ್ಡಾಯವಾಗಿ ಆಚರಿಸುವ ಮೂಲಕ ಕಾಯಕ-ದಾಸೋಹಕ್ಕೆ ಆದ್ಯತೆ ನೀಡಿದ್ದರು. ಅದನ್ನು ಡಿ. ಕೆ. ಕೊಟ್ರಶೆಟ್ಟಿ ಫೌಂಡೇಶನ್, ಭಾರತ್ ಗ್ಯಾಸ್ ಸಂಸ್ಥೆಯ ಉದ್ಯಮಿ ಸೋಮಶೇಖರ ದುಂಡಪ್ಪ ಕೊಟ್ರಶೆಟ್ಟಿ ನಿರಂತರವಾಗಿ ನಡೆಸಿಕೊಂಡು ಬರುತ್ತಿರುವುದು ಪ್ರಶಂಸಾರ್ಹವೆಂದು ರಬಕವಿ ಬನಹಟ್ಟಿ ನಗರಸಭೆಯ ಪೌರಾಯುಕ್ತ ಜಗದೀಶ ಈಟಿ ಹೇಳಿದರು.

ರಬಕವಿಯ ದಾನಮ್ಮದೇವಿ ದೇವಸ್ಥಾನದಲ್ಲಿ ಅಮಾವಾಸ್ಯೆ ನಿಮಿತ್ಯ ಮೇ 27 ರಂದು ಜರುಗಿದ ಅನ್ನದಾಸೋಹ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸಮಸ್ತ ಜೀವರಾಶಿಗಳಿಗೆ ಶಕ್ತಿಯ ಮೂಲವೇ ಅನ್ನವಾಗಿದ್ದು, ಅದನ್ನು ಪವಿತ್ರ ದೇಗುಲಗಳಲ್ಲಿ ನಡೆಸುವ ಪದ್ಧತಿ ನಮ್ಮ ಪರಂಪರೆಯ ಕುರುಹಾಗಿದೆ ಎಂದರು. ನಗರಸಭೆ ಸದಸ್ಯ ಯಲ್ಲಪ್ಪ ಕಟಗಿ ಮಾತನಾಡಿ ಉತ್ತರ ಕರ್ನಾಟಕದ ಪ್ರಸಿದ್ಧ ದೇಗುಲಗಳು, ಮಠ-ಮಾನ್ಯಗಳು ದಾಸೋಹ ನಡೆಸುತ್ತ ಬಂದಿದ್ದು ಭಕ್ತರಿಗೆ ಪ್ರಸಾದ ರೂಪದಲ್ಲಿ ವಿತರಿಸುವುದು ಸಾಮಾನ್ಯವಾಗಿದೆ. ಆದ-ರೆ ರಬಕವಿಯ ದಾನಮ್ಮ ದೇವಾಲಯದಲ್ಲಿ ಡಿ. ಕೆ. ಕೊಟ್ರಶೆಟ್ಟಿ ಫೌಂಡೇಶನ್ ನಡೆಸುತ್ತಿರುವ ಅನ್ನದಾನ ಪ್ರಸಾದ ರೂಪದಲ್ಲಿ ದರ್ಶನಕ್ಕೆ ಬರುವ ಭಕ್ತರು ಪೂಜ್ಯ ಭಾವದಿಂದ ಸ್ವೀಕರಿಸುತ್ತಿರುವುದು ಅವರಲ್ಲಿ ಧನ್ಯತಾಭಾವ ಅರಳಿಸುತ್ತಿದೆ. ಡಿ. ಕೆ. ಕೊಟ್ರಶೆಟ್ಟಿ ಫೌಂಡೇಶನ್ ಅನ್ನದಾನದ ಜೊತೆಗೆ ಬಡ ಮಕ್ಕಳಿಗೆ ಪಠ್ಯ ಪುಸ್ತಕ, ಪೆನ್ನುಗಳನ್ನು ವಿತರಿಸುವ ಮೂಲಕ ಸಾಮಾಜಿಕ ಬದ್ಧತೆ ಮೆರೆದಿದೆ ಎಂದರು.

ಟ್ರಸ್ಟ ಅಧ್ಯಕ್ಷ ಶಿವಜಾತ ಜಿ. ಉಮದಿ, ಸೋಮಶೇಖರ ದುಂಡಪ್ಪ ಕೊಟ್ರಶೆಟ್ಟಿ, ನಗರಸಭೆ ವ್ಯವಸ್ಥಾಪಕ ಬಬಲಾದಿ, ಮುಖೇಶ ಬನಹಟ್ಟಿ, ಮುತ್ತಣ್ಣ ಚೌಡಕಿ, ಅಭಿನಂದನ ಸೋನಾರ, ಸಂಜಯ ತೇಲಿ, ಉದಯಕುಮಾರ ಜಿಗಜಿನ್ನಿ, ಬಸವರಾಜ ಉ. ಮುತ್ತೂರ, ಪ್ರಕಾಶ ಯಂಡಿಗೇರಿ, ಮಲ್ಲಿಕಾರ್ಜುನ ಜತ್ತಿ, ಮಲ್ಲಿಕಾರ್ಜುನ ಮುತ್ತೂರ, ವಿಜಯಕುಮಾರ ಹಲಕುರ್ಕಿ, ಮಲ್ಲಿಕಾರ್ಜುನ ಗಡೆನ್ನವರ, ಮಹಾದೇವಯ್ಯಾ ನಂದ್ಯಾಗೋಳ ಸೇರಿದಂತೆ ಇನ್ನೂ ಹಲವರು ಭಾಗವಹಿಸಿದ್ದರು.

# ಮುಂಗಾರಿನ ಬಿತ್ತನೆಗೆ ಬೀಜಗಳ ಕೊರತೆಯಿಲ್ಲ: ಶಾಸಕ ಗುಡಗುಂಟಿ

**ಜಮಖಂಡಿ :** ಪ್ರಸಕ್ತ ಮುಂಗಾರು ಹಂಗಾಮಿನ ಬಿತ್ತನೆ ಬೀಜ ವಿತರಣೆ ಯೋಜನೆ ಅಡಿಯಲ್ಲಿ ತಾಲೂಕಿನ ರೈತ-ರಿಗೆ ಶಾಸಕ ಜಗದೀಶ ಗುಡಗುಂಟಿ ಅವರು ಸಾಂಕೇತಿಕವಾಗಿ ಬಿತ್ತನೆಯ ಬೀಜಗಳನ್ನು ವಿತರಿಸಿದರು.

ನಗರದ ರೈತ ಸಂಪರ್ಕ ಕೇಂದ್ರದಲ್ಲಿ ನಡೆದ ಪ್ರಸಕ್ತ ಮುಂಗಾರು ಹಂಗಾಮಿನ ಬಿತ್ತನೆ ಬೀಜ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು,

ರೈತ ಬಾಂಧವರು ಕೃಷಿ ಇಲಾಖೆ ಅಥ-ವಾ ಕೃಷಿ ವಿಜ್ಞಾನ ಕೇಂದ್ರ ಸೂಚಿಸುವ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಮಣ್ಣಿನ ತೇವಾಂಶವನ್ನು ಅರಿತು ಬಿತ್ತನೆ ಮಾಡಬೇಕು.

ಇದರಿಂದ ಉತ್ತಮ ಬೆಳೆ ಹಾಗೂ ಹೆಚ್ಚಿನ




ಇಳುವರಿ ಪಡೆಯಲು ಸಹಾಯವಾಗಲಿದೆ. ಜಗತ್ತಿಗೆ ಅನ್ನ ನೀಡುತ್ತಿರುವ ರೈತರ ಮಹತ್ವವಾದ ಕೆಲಸವಾಗಿದೆ ಎಂದರು.

ಪ್ರಸ್ತುತ ಹಂಗಾಮಿನಲ್ಲಿ ಅವಶ್ಯಕವಿರುವ ಬೀಜ ದಾಸ್ತಾನು,

ಬೀಜ ವಿತರಣೆ, ವಿವಿಧ ಬೀಜ ಮೊಳಕೆ ಪರೀಕ್ಷೆ ವೀಕ್ಷಣೆ ಮತ್ತು ಕ್ಯೂಆರ್ ಕೋಡ್ ಯಂತ್ರದ ಮೂಲಕ ವಿತರಣೆ ನಡೆಯಲಿದೆ. ಇಲಾಖೆಯಿಂದ ಗುಣಮಟ್ಟದ ಬೀಜಗಳ ವಿತರಣೆ ಮಾಡಲಾಗುತ್ತಿದೆ ಎಂದರು.

ಸಹಾಯಕ ಕೃಷಿ ನಿರ್ದೇಶಕ ಸಿದ್ದಪ್ಪ ಪಟ್ಟಿಹಾಳ ಮಾತನಾಡಿ, ಪ್ರಸ್ತುತ ತಾಲೂಕಿನ ಜಮಖಂಡಿ ಹಾಗೂ ಸಾವಳಗಿ ಹೋಬಳಿಯಲ್ಲಿ ಬಿತ್ತನೆ ಬೀಜಗಳ ಸಮರ್ಪಕ ದಾಸ್ತಾನು ಸಂಗ್ರಹಿಸಲಾಗಿದೆ. ಸೋಯಾ, ಅವರೆ, ಉದ್ದು, ಹೆಸರು ಮತ್ತು ತೊಗರಿ ಬೀಜಗಳ ದಾಸ್ತಾನು ಮಾಡಲಾಗಿದೆ ಎಂದರು. ಈ ಸಂದರ್ಭದಲ್ಲಿ ಪ್ರಗತಿಪರ ರೈತರಾದ ನಾಗಪ್ಪ ಸನದಿ, ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಶಂಕರರಾವ ಪವಾರ, ರಾಜಕುಮಾರ ಕುಚನೂರ, ರಮೇಶ ಪಡಸಲಗಿ, ಆತ್ಮಯೋಜನೆ ತಾಂತ್ರಿಕ ವ್ಯವಸ್ಥಾಪಕ ಕೆ. ಎ. ಜಮಖಂಡಿ ಸಹಿತ ಇನ್ನೂ ಹಲವರು ಉಪಸ್ಥಿತರಿದ್ದರು.

# ಜಿಗ್ ಜ್ಯಾಗ್‌ಗೆ ಅಪಘಾತ ಸಂಭವಿಸುವ ಸಾಧ್ಯತೆ !

**ಬಾಗಲಕೋಟೆ :** ರಾಜ್ಯದಲ್ಲಿ ಯಾವುದೇ ಜಿಲ್ಲೆಯಲ್ಲಿ ಇಲ್ಲದ ಜಿಗ್ ಜ್ಯಾಗ್ ಅಡೆತಡೆ ಬಾಗಲಕೋಟ ಜಿಲ್ಲೆಯಲ್ಲಿ ಮಾತ್ರ ಇದೆ.

ಬ್ಯಾರಿಕೇಡ್ ಗಳನ್ನು ಜಿಗ್ ಜ್ಯಾಗ್ ರೀತಿಯಲ್ಲಿ ಹೆದ್ದಾರಿಯಲ್ಲಿ ಅಡ್ಡಾದಿಡ್ಡಿ ಅಳವಡಿಸಿರುತ್ತಾರೆ. ರಾತ್ರಿ ವೇಳೆಯಲ್ಲಿ ಧಿಡೀರಾಗಿ ಈ ಜಿಗ್ ಜ್ಯಾಗ್ ತಡೆ ಎದುರಾದಾಗ ವಾಹನಗಳು ಗಕ್ಕೆಂದು ಬ್ರೆಕ್ ಹಾಕುತ್ತಿದ್ದು, ಹಿಂದಿನಿಂದ ಬರುವ ವಾಹನಗಳು ಢಿಕ್ಕಿ ಹೊಡೆದು ಸಾಕಷ್ಟು ಅಪಘಾತ ಸಂಭವಿಸುವ ಸಾಧ್ಯತೆ ಇದೆ. ದ್ವಿಚಕ್ರ ವಾಹನ ಸವಾರರ ಗೋಳಂತೂ ಹೇಳತೀರದು.

ಪೋಲೀಸರು ಹೆದ್ದಾರಿಯಲ್ಲಿ ಬ್ಯಾರಿಕೇಡ್ ಹಾಕಿ ಮಂಡ್ಯದಲ್ಲಿ ಇತ್ತೀಚೆಗೆ ವಾಹನ ತಪಾಸಣೆ ಮಾಡುತ್ತಿದ್ದ ವೇಳೆ ಬೈಕ್ ಮೇಲಿಂದ ಕೆಳಗೆ ಬಿದ್ದು ಮೂರು ವರ್ಷದ ಮಗು ಅಸುನೀಗಿದ್ದನ್ನು ಇಲ್ಲಿ ಸ್ಮರಿಸಬಹುದು.

**-ನೀಲಕಂಠ ದಾತಾರ, ಪತ್ರಕರ್ತ**

### ಪ್ರವಾಸಿ ತಾಣಗಳಲ್ಲಿನ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲನೆ ಸಭೆ

# ಜಿಲ್ಲೆಯ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಹಾಗೂ ಕಾಮಗಾರಿಗಳ ಪ್ರಗತಿಗೆ ಹೆಚ್ಚಿನ ಆದ್ಯತೆ ನೀಡಿ – ಜಿಲ್ಲಾಧಿಕಾರಿ ನಲಿನ್ ಅತುಲ್

**ಕೊಪ್ಪಳ :** ಕೊಪ್ಪಳ ಜಿಲ್ಲೆಯ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಹಾಗೂ ಅಭಿವೃದ್ಧಿ ಕಾಮಗಾರಿಗಳ ಪ್ರಗತಿಗೆ ಹೆಚ್ಚಿನ ಆದ್ಯತೆ ನೀಡಲು ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿದರು.

ಅವರು ಸೋಮವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಕೊಪ್ಪಳ ಜಿಲ್ಲೆಯ ಐತಿಹಾಸಿಕ ಪ್ರವಾಸಿ ತಾಣಗಳ ಬಳಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ಕುರಿತು ಕರೆದ ಪ್ರಗತಿ ಪರಿಶೀಲನೆ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಕೊಪ್ಪಳ ಜಿಲ್ಲೆಯು ಐತಿಹಾಸಿಕ ಪ್ರವಾಸಿ ತಾಣಗಳನ್ನು ಹೊಂದಿದ್ದು, ಜಿಲ್ಲೆಯ ಪ್ರವಾಸೋದ್ಯಮವನ್ನು ರಾಷ್ಟ್ರೀಯ ಮಟ್ಟದಲ್ಲಿ ಅಭಿವೃದ್ಧಿಪಡಿಸಬೇಕು. ಬ್ರ್ಯಾಂಡ್ ಕೊಪ್ಪಳ ಕಾರ್ಯಕ್ರಮದಡಿಯಲ್ಲಿ ಜಿಲ್ಲೆಗೆ ದೇಶಿಯ ಮತ್ತು ವಿದೇಶಿಯ ಪ್ರವಾಸಿಗರನ್ನು ಸೆಳೆಯುವ ಕೆಲಸವಾಗಬೇಕು. ಈ ಬಗ್ಗೆ ಜಿಲ್ಲೆಯ ಐತಿಹಾಸಿಕ ತಾಣಗಳನ್ನು ವೆಬ್ ಸೈಟ್ ಅಥವಾ ಆನ್‌ಲೈನ್ ಮೂಲಕ ಹೆಚ್ಚಿನ ಪ್ರಚಾರಪಡಿಸಿ ಸಾರ್ವಜನಿಕ–ರಿಗೆ ಅರಿವು ಮೂಡಿಸಬೇಕು. ಜಿಲ್ಲೆಯ ಅಂಜನಾದ್ರಿ ಬೆಟ್ಟದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಸಮಗ್ರ ಅಭಿವೃದ್ಧಿ, ಸುಪ್ರಸಿದ್ಧ ಧಾರ್ಮಿಕ ಮತ್ತು ಐತಿಹಾಸಿಕ ಕ್ಷೇತ್ರಗಳಾದ ಹುಲಿಗಿ ಗ್ರಾಮದ ಶ್ರೀ ಹುಲಿಗೆಮ್ಮ ದೇವಿ



ದೇವಸ್ಥಾನದ ಸಮಗ್ರ ಅಭಿವೃದ್ಧಿ, ಕನಕಗಿ–ರಿಯ ಶ್ರೀ ಕನಕಾಚಲಪತಿ ದೇವಸ್ಥಾನದ ಅಭಿವೃದ್ಧಿ, ಹಿರೇಬೇಣಕಲ್ ಗ್ರಾಮದ ಮೋರೆರ್ ಬೆಟ್ಟದ ಅಭಿವೃದ್ಧಿ, ಇಟಗಿಯ ಮಹಾದೇವ ಕೊಪ್ಪಳ ಕೋಟೆ, ಹುಲಿಕೆರೆ ಅಭಿವೃದ್ಧಿ ಕಾಮಗಾರಿಗಳು ಸೇರಿದಂತೆ ಕೊಪ್ಪಳ ಜಿಲ್ಲೆಯ ಐತಿಹಾಸಿಕ ಪ್ರವಾಸಿ ತಾಣಗಳ ಬಳಿ ಕೈಗೊಂಡಿರುವ ಎಲ್ಲಾ ಅಭಿವೃದ್ಧಿ ಕಾಮಗಾರಿಗಳ ಪ್ರಗತಿಗೆ ಹೆಚ್ಚಿನ ಆದ್ಯತೆ ನೀಡಿ ಎಂದರು.

ಜಿಲ್ಲೆಯ ಐತಿಹಾಸಿಕ ಸ್ಮಾರಕಗಳ ಗುರುತಿಸಬೇಕು ಹಾಗೂ ಅವುಗಳ ರಕ್ಷಣೆಗೆ ಸೂಕ್ತ ಕ್ರಮ ಕೈಗೊಳ್ಳಬೇಕು. ರೂ. 100 ಕೋಟಿ ಅನುದಾನದಲ್ಲಿ ಅಂಜನಾದ್ರಿಯಲ್ಲಿ ಪ್ರವಾಸಿ ಮಂದಿರ ನಿರ್ಮಾಣ, ಶಾಪಿಂಗ್ ಕಾಂಪ್ಲೆಕ್ಸ್ ಶೌಚಾಲಯ ನಿರ್ಮಾಣ, ಪ್ರದಕ್ಷಿಣಾ ಪಥ ಹಾಗೂ ವಿವಿಧ ಕಾಮಗಾ–ರಿಗಳನ್ನು ಕೈಗೊಳ್ಳಲಾಗುತ್ತಿದ್ದು, ಈ ಎಲ್ಲಾ ಕಾಮಗಾರಿಗಳ ಪ್ರಗತಿಗೆ ವೇಗ ನೀಡಬೇಕು. ಇದರ ಜೊತೆಗೆ ಇತರೆ ಕಾಮಗಾರಿಗಳಿಗೆ ಸರ್ಕಾರವು ಮತ್ತೆ ರೂ. 100 ಕೋಟಿ ಅನುದಾನ ನೀಡಿದ್ದು, ಯೋಜನಾ ವರದಿ ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿ, ಅನುಮೋದನೆ ಬಳಿಕ ಹೊಸ ಕಾಮಗಾ–ರಿಗಳ ಅನುಷ್ಠಾನಕ್ಕಾಗಿ ಕ್ರಮ ವಹಿಸಬೇಕು.

ಇದಲ್ಲದೆ ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನ ಹಾಗೂ ಕನಕಗಿರಿಯ ಕನಕಾಚಲಪತಿ ದೇವಸ್ಥಾನದ ಸಮಗ್ರ ಅಭಿವೃದ್ಧಿಗೆ ಮತ್ತು ಒಂದು ಜಿಲ್ಲೆ–ಒಂದು ತಾಣ ಯೋಜನೆ ಅಡಿಯಲ್ಲಿ ಶ್ರೀ ಇಟಗಿ ಮಹಾದೇವ ದೇವಾಲಯವನ್ನು ಸಾರ್ವಜನಿಕ ಸಹಭಾಗಿತ್ವ ಮಾದರಿಯಲ್ಲಿ(ಪಿಪಿಪಿ) ಸಮಗ್ರ ಅಭಿವೃದ್ಧಿ ಮಾಡಬೇಕು. ಹಿರೇಬೆಣಕಲ್ ಗ್ರಾಮದ ಮೋರೆರ ಬೆಟ್ಟದ ಸುತ್ತಮುತ್ತಲಿನ ಪ್ರದೇಶವು ಭಾರತೀಯ ಸರ್ವೇಕ್ಷಣ ಇಲಾಖೆ ಹಂಪಿ ವೃತ್ತ, ಅರಣ್ಯ ಇಲಾಖೆಗೆ ಒಳಪಟ್ಟಿದ್ದು, ಈ ಬೆಟ್ಟದ ಅಭಿವೃದ್ಧಿ ದೃಷ್ಟಿಯಿಂದ ಈ ಬೆಟ್ಟಕ್ಕೆ ತೆರಳಲು ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವುದು. ಬೆಟ್ಟಕ್ಕೆ ತೆರಳುವ ಮಾರ್ಗದಲ್ಲಿ ಸೈನೇಜ್ ಮತ್ತು ಹೋರ್ಡಿಂಗ್ ಅಳವಡಿಕೆ, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ನಿರ್ಮಾಣ ಹಾಗೂ ಮುಂತಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಯೋಜನಾ ವರದಿ ತಯಾರಿಸಿ ಸರ್ಕಾರಕ್ಕೆ ಸಲ್ಲಿಸಿ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾ–ರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿ ರಾಹುಲ್ ರತ್ನಂ ಪಾಂಡೆಯ, ಉಪ ಅರಣ್ಯ ಸಂರಕ್ಷಣಾಧಿಕಾರಿ ಕಾವ್ಯ, ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಕೊಪ್ಪಳ ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಡಿ.ನಾಗರಾಜ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ತಹಶಿಲ್ದಾರರು ಹಾಗೂ ಕಾಮಗಾರಿಗಳ ಅನುಷ್ಠಾನ ಏಜೆನ್ಸಿಯವರು ಉಪಸ್ಥಿತರಿದ್ದರು.

# ಜೆಎಸ್‌ಎಸ್ ವಿಶೇಷ ಚೇತನರ ಡಿಪ್ಲೊಮಾ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಕೊಪ್ಪಳ :** 2025–26ನೇ ಸಾಲಿಗೆ ಅಖಿಲ ಭಾರತ ಮಟ್ಟದಲ್ಲಿ ವಿಶೇಷಚೇತನ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಂದ ಮೂರು ವರ್ಷಗಳ ಅವಧಿಯ ಡಿಪ್ಲೊಮಾ ಕೋರ್ಸುಗಳ ಪ್ರವೇಶಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅನುದಾನಿತ ಕೋರ್ಸುಗಳಾದ ಆರ್ಕಿಟೆಕ್ಚರ್ ಅಸಿಸ್ಟೆಂಟ್‌ಷಿಪ್, ಕಮರ್ಷಿಯಲ್ ಪ್ರಾಕ್ಟೀಸ್, ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್, ಅನುದಾನ ರಹಿತ ಕೋರ್ಸುಗಳಾದ ಜ್ಯುವೆಲರಿ ಡಿಸೈನ್ ಮತ್ತು ಟೆಕ್ನಾಲಜಿ, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಇಂಜಿನಿಯರಿಂಗ್, ಕಂಪ್ಯೂಟರ್ ಅಪ್ಲಿಕೇಷನ್ಸ್ (ಫಾರ್ ವಿಜ್ಯುವಲಿ ಇಂಪೇರ್ಡ್), ಅಪಾರೇಲ್ ಡಿಸೈನ್ ಮತ್ತು ಫ್ಯಾಬ್ರಿಕೇಷನ್ ಟೆಕ್ನಾಲಜಿ, ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಮತ್ತು ಎಲೆಕ್ಟ್ರಿಕ್ ವೆಹಿಕಲ್ ಟೆಕ್ನಾಲಜಿ ಕೋರ್ಸುಗಳಿಗೆ ಲಭ್ಯವಿದ್ದು, ಅರ್ಜಿ ಸಲ್ಲಿಸಬಹುದು.

ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಹಾಗೂ ಶೇ.40 ಮತ್ತು ಮೇಲ್ಪಟ್ಟು ಮೂಳೆ ಮತ್ತು ಕೀಲು ಅಂಗವಿಕಲತೆ,

ಶೇ.60 ಡಿಬಿ ಮತ್ತು ಮೇಲ್ಪಟ್ಟು ಕಿವುಡು ಮತ್ತು ಮೂಗು ಅಂಗವಿಕಲತೆ ಮತ್ತು ಕಂಪ್ಯೂಟರ್ ಅಪ್ಲಿಕೇಷನ್ಸ್ (ಫಾರ್ ವಿಜ್ಯುವಲಿ ಇಂಪೇರ್ಡ್) ಕೋರ್ಸಿಗೆ 6/60 ಅಥವಾ 20/200 ಸ್ನೆಲೆನ್ ಅಂಧತ್ವ ಹೊಂದಿದ ಅರ್ಹ ಅಭ್ಯರ್ಥಿಗಳು ಡಿಪ್ಲೊಮಾ ಕೊರ್ಸುಗಳಿಗೆ ಅರ್ಜಿ ಸಲ್ಲಿಸಬಹುದು.

ಅರ್ಹ ವಿದ್ಯಾರ್ಥಿಗಳಿಗೆ ರಾಜ್ಯ ಮತ್ತು ರಾಷ್ಟ್ರ ಮಟ್ಟದ ವಿದ್ಯಾರ್ಥಿವೇತನದ ಆರ್ಥಿಕ ಸಹಾಯ ದೊರೆಯುತ್ತದೆ. ಪಾಲಿಟೆಕ್ನಿಕ್‌ನ ಯಶಸ್ವಿ ವಿದ್ಯಾರ್ಥಿಗಳಿಗೆ ಉದ್ಯೋಗ ಮತ್ತು ತರಬೇತಿ ಕೇಂದ್ರದ ಮೂಲಕ ಉದ್ಯೋಗಾವಕಾಶವನ್ನು ಕಲ್ಪಿಸಿಕೊಡಲಾಗುತ್ತದೆ. ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ವಿದ್ಯಾರ್ಥಿನಿಲಯದ ಸೌಲಭ್ಯ ಕಲ್ಪಿಸಲಾಗಿದೆ.

ಅರ್ಜಿಯನ್ನು ಸಲ್ಲಿಸಲು ಜೂನ್ 16 ಕೊನೆಯ ದಿನವಾಗಿದ್ದು, ನಿಗದಿತ ದಿನಾಂಕದೊಳಗೆ ಅರ್ಜಿಯನ್ನು ಕಚೇರಿಗೆ ತಲುಪಿಸಬೇಕು. ಪ್ರವೇಶ ಅರ್ಜಿಯನ್ನು ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್, ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಸಮುಚ್ಛಯ, ಮೈಸೂರು–570006 ವಿಳಾಸದಿಂದ ಸಾಮಾನ್ಯ ವರ್ಗದ ಅಭ್ಯರ್ಥಿಗಳು ರೂ.100/– ಹಾಗೂ ಎಸ್‌ಸಿ/ಎಸ್‌ಟಿ/ಪ್ರ–1 ವರ್ಗದವರಿಗೆ ರೂ. 50/–ರ ನಗದು ಅಥವಾ ಡಿಡಿ ಮೂಲಕ ಮೈಸೂರಿನಲ್ಲಿ ಸಂದಾಯವಾಗುವಂತೆ ಕಳುಹಿಸಿ ಪಡೆಯಬಹುದು ಅಥವಾ ವೆಬ್‌ಸೈಟ್ www.jsspda.org ಮೂಲಕ ಡೌನ್ಲೋಡ್ ಮಾಡಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್, ಇ–ಮೇಲ್ jsspda@gmail.com ಅಥವಾ ಮೊ.ಸಂ. ೯844644೯37 ಮೂಲಕ ಸಂಪರ್ಕಿಸಬಹುದು.

# ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

**ಕೊಪ್ಪಳ :** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯಗಳ (ಪಿ.ಯು.ಸಿ., ಐ.ಟಿ.ಐ. ಮತ್ತು ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಮಾತ್ರ) 2025–26ನೇ ಸಾಲಿಗೆ ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 3ಎ, 3ಬಿ, ಪ.ಜಾ/ಪ.ವರ್ಗ ಮತ್ತು ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದ್ದು, ಪ್ರವರ್ಗ–1, ಎಸ್ಸಿ & ಎಸ್ಟಿ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ ರೂ. 2.50 ಲಕ್ಷ ಮಿತಿಯಲ್ಲಿರಬೇಕು. ಪ್ರವರ್ಗ–2ಎ, 2ಬಿ, 3ಎ, 3ಬಿ ಇತರೆ ಹಿಂದುಳಿದ ವರ್ಗ ಹಾಗೂ ಇತರೆ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ ರೂ.1 ಲಕ್ಷಕ್ಕೆ ಮೀರಿರಬಾರದು.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಜೂನ್ 20 ಕೊನೆಯ ದಿನಾಂಕವಾಗಿದ್ದು, ಆಸಕ್ತ ವಿದ್ಯಾರ್ಥಿಗಳು ವೆಬ್‌ಸೈಟ್ https://shp.karnataka.gov.in/bcwd ನಲ್ಲಿ ಅರ್ಜಿಯನ್ನು ಸಲ್ಲಿಸಬೇಕು. ತಾಲ್ಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ

ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ www.bcwd.karnataka.gov.in ನ್ನು ವೀಕ್ಷಿಸಬಹುದು ಹಾಗೂ ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwdhelpline@gmail.com ಮುಖಾಂತರ ಅಥವಾ ಜಿಲ್ಲಾ, ತಾಲ್ಲೂಕು ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರನ್ನು ಅಗತ್ಯ ದಾಖಲೆಗಳೊಂದಿಗೆ ಹಾಗೂ ಸಹಾಯವಾಣಿ ಸಂಖ್ಯೆ: 8050770005, 8050770004 ಗೆ ಸಂಪರ್ಕಿಸಬಹುದು ಎಂದು ಕೊಪ್ಪಳ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೃಷಿ ವಿಜ್ಞಾನ ಪದವಿಯ ವಿಷಯದಲ್ಲಿ ಚಿನ್ನದ ಪದಕ ಗಳಿಸಿದ ಶಿವರಾಜ ವಿ. ಸಜ್ಜನರ

**ಕೊಪ್ಪಳ :** ರಾಯಚೂರು ಜಿಲ್ಲೆಯ ಭೀಮರಾಯನಗುಡಿಯ ಕೃಷಿ ವಿಜ್ಞಾನ ಕಾಲೇಜಿನ ವಿದ್ಯಾರ್ಥಿ ಶಿವರಾಜ ವೀ. ಸಜ್ಜನರ ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ ವಿಷಯದಲ್ಲಿ ಹೆಚ್ಚಿನ ಅಂಕ ಗಳಿಸಿದ್ದ–ರಿಂದ ಮಾತೋಶ್ರೀ ಮರಗಬಾಯಿ ಬಾಬುಲಾಲ್ ಜೈನ್ ಶಹಪೂರ ಚಿನ್ನದ ಪದಕ ಗಳಿಸಿದ್ದಾರೆ. ಸೋಮವಾರ ನಡೆದ ರಾಯಚೂರು ಕೃಷಿ ವಿವಿ ಘಟಿ–ಕೋತ್ಸವದಲ್ಲಿ ಚಿನ್ನದ ಪದಕ ಹಾಗೂ ಪದವಿ ಪ್ರಮಾಣಪತ್ರ ಪ್ರದಾನ ಮಾಡಲಾಯಿತು. ಈ ಸಂದರ್ಭದಲ್ಲಿ ಶಿವರಾಜ ಹೆತ್ತವರಾದ ಡಾ.ವೀರಣ್ಣ ಎಸ್. ಸಜ್ಜನರ ಹಾಗೂ ಆರತಿ ಸಿಹಿ ತಿನ್ನಿಸಿ ಸಂಭ್ರಮಿಸಿದರು.




# ವಿಕಲಚೇತನರ ವಿಶೇಷ ಶಾಲೆಗಳಿಗೆ ಪ್ರವೇಶ ಪ್ರಾರಂಭ

**ಕೊಪ್ಪಳ:** ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಅಡಿ ಕಾರ್ಯ ನಿರ್ವಹಿಸುತ್ತಿರುವ ವಿಶೇಷ ಶಾಲೆಗಳಿಗೆ 2025–26ನೇ ಸಾಲಿನ ಪ್ರವೇಶ ಪ್ರಾರಂಭವಾಗಿದ್ದು, ಅರ್ಹ ವಿದ್ಯಾರ್ಥಿಗಳು ಪ್ರವೇಶ ಪಡೆಯಬಹುದು. ಜಿಲ್ಲೆಯ ಗಂಗಾವತಿ ತಾಲೂಕಿನ ದಾಸನಾಳ ಗ್ರಾಮದ ನಾದಬಿಂದು ಶ್ರವಣ ನ್ಯೂನ್ಯತೆವುಳ್ಳ (ಮೂಕ ಮತ್ತು ಕಿವುಡ) ಮಕ್ಕಳ ಶಾಲೆಯಲ್ಲಿ 1 ರಿಂದ 7 ನೇ ತರಗತಿವರೆಗೆ ಹಾಗೂ ಮಾನಸ ಬುದ್ದಿಮಾಂದ್ಯ ಮಕ್ಕಳ ವಸತಿಯುತ ಶಾಲೆಯಲ್ಲಿ ಪ್ರಸಕ್ತ ಸಾಲಿಗೆ ಪ್ರವೇಶ ಪ್ರಾರಂಭವಾಗಿದ್ದು, ಉಚಿತ ಊಟ, ವಸತಿ, ಸಮವಸ್ತ್ರ ಹಾಗೂ ಪುಸ್ತಕಗಳು ಮತ್ತು ಇನ್ನಿತರ ಮುಲಭೂತ ಸೌಲಭ್ಯಗಳೊಂದಿಗೆ ಗುಣಮಟ್ಟದ ಶಿಕ್ಷಣ ನೀಡಲಾಗುತ್ತದೆ. ಈ ಶಾಲೆಗಳಲ್ಲಿ ವಿಶೇಷ ಶಿಕ್ಷಣದಲ್ಲಿ ತರಬೇತಿ ಪಡೆದ ನುರಿತ ಅನುಭವಿ ಶಿಕ್ಷಕರಿಂದ ಮಕ್ಕಳಿಗೆ ವಿಶೇಷ ಶಿಕ್ಷಣ ಮತ್ತು ತರಬೇತಿ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಶಾಲೆಯ ದ್ವಿ.ದ.ಸ. ಬಸವರಾಜ ಮೊ. ಸಂಖ್ಯೆ: 9900369336 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ವೆಂಕಟೇಶ ದೇಶಪಾಂಡೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಎಲ್ಲ ಸಂಪತ್ತಿಗಿಂತ ಆರೋಗ್ಯ ಸಂಪತ್ತು ದೊಡ್ಡದು: ಡಾ. ಪ್ರಭುಗೌಡ

**ತಾಳಿಕೋಟೆ :** ಮನುಷ್ಯನಿಗೆ ಹಣ, ಆಸ್ತಿ, ಎಲ್ಲ ಸಂಪತ್ತು ಗಳಿಸಬಹುದು ಆದರೆ ಆರೋಗ್ಯ ಸಂಪತ್ತು ಕೆಟ್ಟು ಹೋದರೆ ಎಲ್ಲ ಸಂಪತ್ತು ಶುನ್ಯವಾಗಲಿದೆ ಹೀಗಾಗಿ ಮೊದಲು ಆರೋಗ್ಯವಂತರಾಗಿ ಬಾಳುವದರ ಕಡೆಗೆ ಎಲ್ಲರೂ ಗಮನ ಕೊಡಬೇಕೆಂದು ವಿಜಯಪುರ ಅನುಗ್ರಹ ಕಣ್ಣಿನ ಆಸ್ಪತ್ರೆಯ ನೇತ್ರ ತಜ್ಞವೈಧ್ಯರಾದ ಡಾ.ಪ್ರಭುಗೌಡ ಲಿಂಗದಳ್ಳಿ ಅವರು ಹೇಳಿದರು.



ಮಂಗಳವಾರರಂದು ತಾಲೂಕಿನ ಚಬನೂರ ಗ್ರಾಮದಲ್ಲಿ ಶ್ರೀ ಅಮೋಘಸಿದ್ದೇಶ್ವರ ಜಾತ್ರಾ ಮಹೋತ್ಸವ ಅಂಗವಾಗಿ ಅನುಗ್ರಹ ವ್ಹಿಜನ್ ಪೌಂಡೇಶನ್, ಅನುಗ್ರಹಣ ಕಣ್ಣಿನ ಆಸ್ಪತ್ರೆ ಹಾಗೂ ಜಿಲ್ಲಾ ಅಂದತ್ವ ನಿವಾರಣೆ ಸಂಸ್ಥೆ ವಿಜಯಪುರ ಹಾಗೂ ಜಾತ್ರಾ ಉತ್ಸವ ಕಮಿಟಿಯ ಸಹಯೋಗದಲ್ಲಿ ಏರ್ಪಡಿಸಲಾದ ಉಚಿತ ನೇತ್ರ ತಪ್ಪಾಸಣೆ ಹಾಗೂ ಚಿಕೀತ್ಸಾ ಶಿಭಿರಕ್ಕೆ ಚಾಲನೆ ನೀಡಿ ಮಾತನಾಡುತ್ತಿದ್ದ ಅವರು ಅನುಗ್ರಹಣ ಕಣ್ಣಿನ ಆಸ್ಪತ್ರೆಯು ಸದಾ ಬಡವರ ಸೇವೆಗೆ ಸಿದ್ದವಾಗಿದೆ ಸುಮಾರು 10 ಲಕ್ಷಕ್ಕೂ ಹೆಚ್ಚು ಹೊರರೋಗಿಗಳ ತಪಾಸಣೆಯನ್ನು ನಡೆಸಿ 3 ಲಕ್ಷ ಜನ ಕಣ್ಣಿನ ರೋಗಿಗಳ ಶಸ್ತ್ರಚಿಕಿತ್ಸೆಯನ್ನು ಮಾಡಲಾಗಿದೆ, ಆರ್ಥಿಕ ತೊಂದರೆ ಇದ್ದವರು ಯಾವ ಕಾರಣ–ಕ್ಕೂ ತಮ್ಮ ದೃಷ್ಟಿಯನ್ನು ಕಳೆದುಕೊಳ್ಳಬಾರದೆಂದು ಅವರಿಗೆ ಅನುಕೂಲವಾಗಲು ಲಕ್ಷಕ್ಕಿಂತಲೂ ಹೆಚ್ಚು ಇಂತಹ ಉಚಿತ ಶಿಬಿರಗಳನ್ನು ಏರ್ಪಡಿಸಿ ಕೆಲಸ ಮಾಡಲಾಗುತ್ತಿದೆ, ಬಡವರಿಗೆ ಜಿಲ್ಲಾ ಕೇಂದ್ರ ಸ್ಥಳಗಳಲ್ಲಿರುವ ನಮ್ಮ ಆಸ್ಪತ್ರೆಗಳಿಗೆ ಬರಲು ತೊಂದರೆಯಾಗುತ್ತದೆ ಎಂದು ವಿಜಯಪುರ ಜಿಲ್ಲೆಯ ಎಲ್ಲಾ ತಾಲೂಕ ಕೇಂದ್ರಗಳಲ್ಲಿ ನಮ್ಮ ಪ್ರಾಥಮಿಕ ಆಸ್ಪತ್ರೆಗಳನ್ನು ತೆರೆಯಲಾಗಿದೆ ಇಲ್ಲಿಯೂ ಬಡವ–ರಿಗಾಗಿ ಒಂದು ದಿನ ಉಚಿತ ಸೇವೆ ಮಾಡಲಾಗುತ್ತಿದೆ. ಚಬನೂರ ಶ್ರೀ ಅಮೋಘಸಿದ್ದೇಶ್ವರ ಜಾತ್ರೆಯು ಜಿಲ್ಲೆಯಲ್ಲಿಯೇ ಪ್ರಸಿದ್ದತೆ ಪಡೆದ ಜಾತ್ರೆ ಇದಾಗಿದೆ ಹೀಗಾಗಿ ಪ್ರತಿವರ್ಷವೂ ನಮ್ಮ ಆಸ್ಪತ್ರೆಯ ನೇತೃತ್ವದಲ್ಲಿ ಉಚಿತ ನೇತ್ರ ತಪಾಸಣೆ ಮತ್ತು ಚಿಕೀತ್ಸಾ ಶಿಬಿರವನ್ನು ಆಯೋಜಿಸುತ್ತಾ ಬಂದಿದ್ದೇವೆ ಶಸ್ತ್ರ ಚಿಕೀತ್ಸೆಗೆ ಆಯ್ಕೆಯಾದವರಿಗೆ ತಾಳಿಕೋಟೆಯಿಂದ ಕಲ್ಬುರ್ಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಶಸ್ತ್ರ ಚಿಕೀತ್ಸೆಯ ನಂತರ ಮರಳಿ ತಂದು ತಾಳಿಕೋಟೆಗೆ ಬುಡವಂತಹ ಕಾರ್ಯ ಮಾಡಲಿದ್ದೇವೆ ಎಲ್ಲ ಖರ್ಚು ಅನುಗ್ರಹ ಆಸ್ಪತ್ರೆಯೇ ಸ್ವಯಂಕೃತವಾಗಿ ವಹಿಸಿಕೊಳ್ಳಲಿದೆ ಎಂದ ಅವರು ಸಾರ್ವಜನಿಕರಿಗೆ ಈ ಉಚಿತ ನೇತ್ರ ತಪಾಸಣಾ ಶಿಬಿರದ ಸದುಪಯೋಗ ಪಡೆದುಕೊಂಡು ಸುಂದರವಾದ ಜಗತ್ತನ್ನು ಕಣ್ಣುತ್ತುಂಬಿಕೊಳ್ಳಬೇಕೆಂದರು.

ಈ ಉಚಿತ ಆರೋಗ್ಯ ತಪಾಸಣೆ ಶಿಬಿರದಲ್ಲಿ 1000 ಜನರು ನೇತ್ರ ತಪಾಸಣೆ ಮಾಡಿಕೊಂಡರಲ್ಲದೇ ಅದರಲ್ಲಿ 300 ಜನಕ್ಕೆ ಶಸ್ತ್ರ ಚಿಕೀತ್ಸೆಗೆ ಆಯ್ಕೆ ಮಾಡಲಾಯಿತು. ಅದರಂತೆ ವಿವಿಧ ರೋಗಗಳಿಗೆ ಸಂಬಂದಿಸಿ 500 ಜನರು ಆರೋಗ್ಯ ತಪಾಸಣೆಯನ್ನು ಮಾಡಿಸಿಕೊಂಡರು.

ಶ್ರೀ ಅಮೋಘಸಿದ್ದೇಶ್ವರ ಜಾತ್ರೋತ್ಸವ ಅಂಗವಾಗಿ ವಿಜಯಪುರ ಬಿಎಲ್‌ಡಿ ವೈಧ್ಯಕೀಯ ಮಹಾ ವಿದ್ಯಾಲಯ ಮತ್ತು ಆಸ್ಪತ್ರೆಯ ನೇತೃತ್ವದಲ್ಲಿ ಎಲಬು–ಕೀಲು, ಚರ್ಮ ರೋಗ, ಕಿವಿ, ಗಂಟಲು, ಮುಗು, ಹಲ್ಲು, ಸ್ತೀರೋಗ, ಪ್ರಸೂತಿ, ಚಿಕ್ಕಮಕ್ಕಳ, ಆರೋಗ್ಯ ತಪಾಸಣೆ ಮತ್ತು ಚಿಕೀತ್ಸೆಯನ್ನು ಉಚಿತವಾಗಿ ನೇರವೇರಿಸಲಾಯಿತು. ಈ ಸಮಯದಲ್ಲಿ ಅನುಗ್ರಹ ಆಸ್ಪತ್ರೆಯ ಮುಖ್ಯಸ್ಥರಾದ ಡಾ.ಶ್ರೀಮತಿ ಮಾಲಿನಿ ಲಿಂಗದಳ್ಳಿ, ಡಾ.ಸಂತೋಷ ಪಾಟೀಲ, ಡಾ.ರೋಹಿಣಿ ಪಾಟೀಲ, ಡಾ.ಆನಂದ ಗೆಣ್ಣೂರ, ಡಾ.ಮಧು ಗೆಣ್ಣೂರ, ಹಾಗೂ ಬಿಎಲ್‌ಡಿ ವೈಧ್ಯಕೀಯ ಮಹಾವಿದ್ಯಾಲಯದ ಹಾಗೂ ಆಸ್ಪತ್ರೆಯ ವೈಧ್ಯರು, ವೈಧ್ಯಕೀಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಸೈನಿಕ, ಅನ್ನ ನೀಡುವ ರೈತ ಎಷ್ಟು ಅವಶ್ಯವೋ ದೇಶದ ಶೈಕ್ಷಣಿಕ ಬೆಳವಣಿಗೆಗೆ ಶಿಕ್ಷಕರ ಪಾತ್ರ ಅಷ್ಟೇ ಮಹತ್ವ: ಎಸ್ಪಿ ಲಕ್ಷ್ಮಣ ನಿಂಬರಗಿ

**ವಿಜಯಪುರ :** ಪಾಲಕರು ಮಕ್ಕಳಿಗೆ ಶ್ರಮದ ಮಹತ್ವ ಮತ್ತು ಹಣದ ಮೌಲ್ಯ ಜೊತೆಗೆ ಮಾನವೀಯ ಮೌಲ್ಯಗಳನ್ನು ಪರಿಚಯಿಸಬೇಕು. ಆಗ ಮಕ್ಕಳು ಶಿಕ್ಷಣದ ಮಹತ್ವ ಅರಿಯುತ್ತಾರೆ. ಮಕ್ಕಳು ನಾವು ಹೇಳುವುದನ್ನು ಕೇಳುವುದಿಲ್ಲ. ನಾವು ಮಾಡುವುದನ್ನು ಮಾಡುತ್ತಾರೆ. ಹಾಗಾಗಿ ಪಾಲಕರು ತಮ್ಮ ಮಕ್ಕಳಿಗೆ ಆದ–'ರ್ಶಪ್ರಾಯವಾಗಿ ಬದುಕಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಅವರು ಹೇಳಿದರು.




ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ ನಡೆಸುವ ಅಖಿಲ ಭಾರತ ಸೈನಿಕ ಶಾಲಾ ಪ್ರವೇಶ ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ, ದ್ವಿತೀಯ, (ಬಾಲಕಿಯರ ಕೆಟಗರಿ) ನಾಲ್ಕನೇ ಮತ್ತು ಆರನೇ ಯಾರ್‌ಂಕ ಪಡೆದು ಅದ್ವಿತೀಯ ಸಾಧನೆ ಮಾಡಿದ ವೇದ ಕೋಚಿಂಗ್ ಅಕಾಡೆಮಿ 156 ವಿದ್ಯಾರ್ಥಿಗಳನ್ನು ನಗರ ಹೊರವಲಯದ ವೇದ ಅಕಾಡೆಮಿಯ ವೇದಭವನದಲ್ಲಿ ಸನ್ಮಾನಿಸಿ ನೂರಾರು ವಿದ್ಯಾರ್ಥಿಗಳ ಪಾಲಕರನ್ನುದ್ದೇಶಿಸಿ ಅವರು ಮಾತನಾಡಿದರು.

ಮಕ್ಕಳಿಗೆ ಪ್ರಸ್ತುತ ಸಮಾಜದಲ್ಲಿ ತುಂಬಾ ಅವಕಾಶಗಳು ಇದ್ದು ಮಕ್ಕಳು ಅವಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಆ ನಿಟ್ಟಿನಲ್ಲಿ ಪಾಲಕರ ಹಾಗೂ ಶಿಕ್ಷಕರ ಪಾತ್ರ ಮಹತ್ವದಾಗಿದೆ. ಪಾಲಕರ ಶ್ರಮ ಮಕ್ಕಳಿಗೆ ತಿಳಿಸಿಕೊಡಬೇಕು ಹಾಗೂ ಸಮಾಜದ ಸವಾಲುಗಳನ್ನು ಎದುರಿಸುವ ಆತ್ಮ ಬಲ ಸ್ಥೈರ್ಯ ತುಂಬಿದಾಗ ಮಕ್ಕಳು ಸಾಧನೆ ಮಾಡಿ ಪಾಲಕರಿಗೆ ಹಾಗೂ ದೇಶಕ್ಕೆ ಹೆಸರು ತಂದುಕೊಡುತ್ತಾರೆ ಎಂದರು.

ದೇಶದ ಗಡಿ ಕಾಯುವ ಸೈನಿಕ, ಅನ್ನ ನೀಡುವ ರೈತ ಎಷ್ಟು ಅವಶ್ಯವೂ ದೇಶದ ಶೈಕ್ಷಣಿಕ ಬೆಳವಣಿಗೆಗೆ ಶಿಕ್ಷಕರ ಪಾತ್ರ ಅಷ್ಟೇ ಮಹತ್ವ ಎಂದರು.

ಬೆಂಗಳೂರಿನ ಆರ್. ವ್ಹಿ . ಕಾಲೇಜಿನ ಪ್ರೊ?ರಫೆಸರ್ ಡಾಕ್ಟರ್ ಆನಂದ ಜತ್ತಿ ಮುಖ್ಯ ಅತಿಥಿಗಳಾಗಿ ಮಾತನಾಡಿ, ಮಕ್ಕಳ ಆರೋಗ್ಯ ಕಲಿಕೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ.

ವೇದ ಅಕಾಡೆಮಿಯಲ್ಲಿನ ಉತ್ತಮ ಆಹಾರ ಪದ್ಧತಿ, ಹಾಸ್ಟೇಲ್, ಉತ್ತಮ ಪರಿಸರ ಹಾಗೂ ಶಿಕ್ಷಕರಿಂದ ನನ್ನ ಮಗ ಸಾಧನೆ ಮಾಡಲು ಸಾಧ್ಯವಾಯಿತು ಎಂದರು. ಪಾಲಕರು ಶಾಲೆಯಲ್ಲಿ ಸಿಗುವ ಕೇವಲ ಭೌತಿಕ ಸೌಲಭ್ಯಗಳ ಕುರಿತು ಯೋಚಿಸದೇ ಅಲ್ಲಿ ಸಿಗುವ ಶಿಕ್ಷಣದ ಗುಣಮಟ್ಟದ ಬಗ್ಗೆ ಯೋಚಿಸಬೇಕು.

ಸಂಸ್ಥೆಯ ಸಲಹಾ ಸಮಿತಿಯ ಸದಸ್ಯ ನಿವೃತ್ತ ಪೊಲೀಸ್ ಅಧಿಕಾರಿ ಬಿ.ಆರ್. ಚೌಕಿಮಠ ಅವರು ಅತಿಥಿಗಳಾಗಿ ಮಾತನಾಡಿ, ಇಂದಿನ ಕಾರ್ಯಕ್ರಮದ ಕೇಂದ್ರ ಬಿಂದು ಮಕ್ಕಳು ಹಾಗೂ ಶಿಕ್ಷಕರು. ಇಂತಹ ಕಾರ್ಯಕ್ರಮ ಹಮ್ಮಿಕೊಂಡಿದ್ದು ಅವ–ರಿಗೆ ಪ್ರೊ?ರೀತ್ಸಾಹ ನೀಡುವ ಉದ್ದೇಶ ಎಂದು ಹೇಳಿದರು. ಮಕ್ಕಳು ಕಡಿಮೆ ಅಂಕ ಪಡೆದಾಗ ಅವರಿಗೆ ತೆಗಳುವುದು ತಪ್ಪು. ಅವರನ್ನು ಮಾನಸಿಕವಾಗಿ ಸದೃಢರನ್ನಾಗಿ ಮಾಡಬೇಕು.

ವೇದ ಸಂಸ್ಥೆಯು ಎಲ್.ಕೆ.ಜಿ ಎಂದು ಪಿ.ಜಿ ವರಗೆ ಗುಣಮಟ್ಟದ ಶಿಕ್ಷಣ ನೀಡುವ ನಿಟ್ಟಿನಲ್ಲಿ ಶ್ರಮವಹಿಸುತ್ತಿದ್ದು ಕೆಲವೇ ದಿನಗಳಲ್ಲಿ ಶಿಕ್ಷಣದ ಹಬ್ ಅನ್ನಾಗಿ ಛಾಪು ಮೂಡಿಸುವಲ್ಲಿ ಸಂಶಯವಿಲ್ಲ ಎಂದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಸಂಸ್ಥೆಯ ಉಪಾಧ್ಯಕ್ಷ ದಯಾನಂದ ಕೆಲೂರ, 111 ವಿದ್ಯಾರ್ಥಿಗಳು, ಸೈನಿಕ ಶಾಲಾ ಪ್ರವೇಶ ಪರೀಕ್ಷಯಲ್ಲಿ 200ಕ್ಕಿಂತ ಹೆಚ್ಚು ಅಂಕ ಪಡೆದು ಅಮೋಘ ಸಾಧನೆ ಮಾಡಿದ್ದಾರೆ ಹಾಗೂ ರಾಜ್ಯದ ಟಾಫರ್‌ಗಳಲ್ಲಿ 6 ವಿದ್ಯಾರ್ಥಿಗಳು ಸ್ಥಾನ ಪಡೆದು ಅಮೋಘ ಸಾಧನೆ ಮಾಡಿದ್ದಾರೆ ಈ ಸಾಧನೆಯ ಶ್ರೇಯಸ್ಸು ಮಕ್ಕಳಿಗೆ ಹಾಗೂ ಶಿಕ್ಷಕರಿಗೆ ಸಲ್ಲುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಸ್ಥೆಯ ಅಧ್ಯಕ್ಷ ಡಾ. ಶಿವಾನಂದ ಕೆಲೂರ ಮಾತನಾಡಿ, ಶ್ರೇಷ್ಠ ಪೊಲೀಸ್ ಅಧಿಕಾ–ರಿಗಳಿಂದ ಸನ್ಮಾನವನ್ನು ಸ್ವೀಕರಿಸಿದ ನೀವು ಅತ್ಯುನ್ನತ ಸಾಧನೆ ಮಾಡುವಂತಾಗಬೇಕು. ಅಲ್ಲದೆ ಮತ್ತೆ ಇದೇ ಸಂಸ್ಥೆಯ ವೇದಿಕೆಯಲ್ಲಿ ಅತಿಥಿ ಸ್ಥಾನವನ್ನು ಅಲಂಕ–ರಿಸುವಂತಾಗಬೇಕೆಂದು ವಿದ್ಯಾರ್ಥಿಗಳಲ್ಲಿ ಕರೆ ನೀಡಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಜೀವಾಳ ಶಿಕ್ಷಕರು ಈ ಸಾಧನೆಗೆ ಅವರಿಗೂ ಸನ್ಮಾನ ಹಾಗೂ ಅಭಿನಂದನಾಪೂರ್ವಕವಾಗಿ 1 ಲಕ್ಷ ಹಣವನ್ನು ನೀಡಿ ಗೌರವಿಸಲಾಯಿತು.

ಸೈನಿಕ ಶಾಲೆಗೆ ರಾಜ್ಯಕ್ಕೆ ಪ್ರಥಮ ಹಾಗೂ ದೇಶಕ್ಕೆ 111 ನೇ ಸ್ಥಾನ ಪಡೆದ ಅನಘ ಜತ್ತಿಗೆ 21 ಸಾವಿರ ನಗದು ಬಹುಮಾನ, ರಾಜ್ಯಕ್ಕೆ ಬಾಲಕಿಯರ ವಿಭಾಗದಲ್ಲಿ ದ್ವಿತೀಯ ಸ್ಥಾನ ಹಾಗೂ ದೇಶಕ್ಕೆ 376 ಸ್ಥಾನ ಪಡೆದ ಅಪೂರ್ವ ಬಂಡಿಗೆ 11 ಸಾವಿರ ಬಹುಮಾನ ಹಾಗೂ ರಾಜ್ಯಕ್ಕೆ 6ನೇ ಹಾಗೂ ದೇಶಕ್ಕೆ 353 ಸ್ಥಾನ ಪಡೆದ ಪ್ರತೀಕ ಬಂಡಗಾರ ಗೆ 11 ಸಾವಿರ ನಗದು ಬಹುಮಾನ ನೀಡಿ ಗೌರವಿಸಿದರು. ರಾಜ್ಯಕ್ಕೆ 9ನೇ ಸ್ಥಾನ ಪಡೆದ ಬಶೀರ ಅಹ್ಮದ ಜೀರಗಾಳ, ಪ್ರಣವ ಝಳಕಿ, ರಾಜ್ಯಕ್ಕೆ 10ನೇ ಸ್ಥಾನ ಪಡೆದ ಅಮೀರ ಅಹ್ಮದ ಉಳಿದ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯಗುರುಗಳಾದ ಸುನೀಲ ಬಿ.ಎಮ್., ಮಹಾದೇವಪ್ರಸಾದ ಕುಲಕರ್ಣಿ ಮುಖ್ಯ ಗುರುಮಾತೆ ರೆಶ್ಮಿ ಕವಟಗಿಮಠ, ಸಾಜೀದ ದರ್ಗಾ ಇದ್ದರು.

ಅರ್ಜುನ ಹಡಗಲಿ ಸ್ವಾಗತಿಸಿದರು, ಜೋತಿ ಕೊಪ್ಪದ ಹಾಗೂ ಸುನೀತಾ ಕೊಲುರ ನಿರೂಪಿಸಿದರು. ರಾಜಶೇಖರ ಮಂಗಾನವರ ವಂದಿಸಿದರು.

# ಮುಂದುವರೆದ ಪೌರ ನೌಕರರ ಮುಷ್ಕರ: ತಹಸೀಲ್ದಾರ್ ಭೇಟಿ



**ತೇರದಾಳ :** ವಿವಿಧ ಬೇಡಿಕೆಗಳ ಈಡೇರಿಸುವಂತೆ ಆಗ್ರಹಿಸಿ ಪೌರ ನೌಕರರ ಸಂಘ ನಡೆಸುತ್ತಿರುವ ಮುಷ್ಕರ ಬುಧವಾರ ಎರಡನೇ ದಿನಕ್ಕೆ ಕಾಲಿಟ್ಟಿದ್ದು ಏತನ್ಮಧ್ಯೆ ಇಲ್ಲಿನ ಪುರಸಭೆ ಆವರಣದಲ್ಲಿ ಪೌರ ನೌಕರರು ನಡೆಸುತ್ತಿರುವ ಮುಷ್ಕರದ ಸ್ಥಳಕ್ಕೆ ತಹಸೀಲ್ದಾರ್ ವಿಜಯಕುಮಾರ ಕಡಕೋಳ ಭೇಟಿ ನೀಡಿ ಮುಷ್ಕರ ನಿರತರ ಬೇಡಿಕೆ ಹಾಗೂ ಸಮಸ್ಯೆಗಳ ಕುರಿತು ಚಚಿ9ಸಿದರು. ನಿಮ್ಮ ಬೇಡಿಕೆಗಳ ಕುರಿತು ಸರಕಾರ ಶೀಘ್ರದಲ್ಲಿ ಕ್ರಮ ಕೈಗೊಳ್ಳಲಿದೆ. ಮುಷ್ಕರ ಕೈಬಿಟ್ಟು ಸಾರ್ವಜನಿಕರ ಸೇವೆಗೆ ಮುಂದಾಗಿ ಎಂದು ಮನವಿ ಮಾಡಿದರು.

ನಾವು ದಿಢೀರನೆ ಮುಷ್ಕರ ಕೈಗೊಂಡಿಲ್ಲ. 45 ದಿನಗಳ ಹಿಂದೆ ನಮ್ಮ ಬೇಡಿಕೆಗಳ ಕುರಿತು ಸರಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಇದುವರೆಗೆ ಒಂದೂ ಬೇಡಿಕೆ ಕುರಿತು ಸರಕಾರ ಮಾತನಾಡಿಲ್ಲ. ಆದ್ದರಿಂದ ಮುಷ್ಕರ ನಡೆಸುವುದು ಅನಿವಾರ್ಯವಾಗಿದೆ ಎಂದು ನೌಕರ ಸಂಘದ ಅಧ್ಯಕ್ಷ ದಯಾನಂದ ಮಾಂಗ, ಕಾರ್ಯದರ್ಶಿ ಮಲ್ಲಿಕಾರ್ಜುನ ಬಿರಾದಾರ ಪಾಟೀಲ ತಹಸೀಲ್ದಾರ್ ಅವರಿಗೆ ಮನವ–ರಿಕೆ ಮಾಡಿಕೊಟ್ಟರು. ನಿಮ್ಮ ಬೇಡಿಕೆ ಕುರಿತು ಜಿಲ್ಲಾಧಿಕಾರಿಗಳ ಮುಖಾಂತರ ಸರಕಾರಕ್ಕೆ ವರದಿ ಸಲ್ಲಿಸುವುದಾಗಿ ತಹಸೀಲ್ದಾರ್ ವಿಜಯಕುಮಾರ ಕಡಕೋಳ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಎಫ್. ಬಿ. ಗಿಡ್ಡಿ, ಘಟಗೆಪ್ಪ ಕುಂಬಾರ, ಮಂಜುನಾಥ ರಾಯನ್ನವರ, ರಘು ಗೋಟಡಕಿ, ಪ್ರಭು ಧರೆನ್ನವರ, ಶೋಭಾ ಮಾಂಗ, ಭಾರತಿ ಮಾಸ್ತಿ, ಮಕ್ಬುಲ್ ಖಲೀಫಾ, ರಾಮಪ್ಪ ಚಿನಗುಂಡಿ, ಸಂಜು ರಾಠೋಡ, ವಸಂತ ಹಟ್ಟಿ ಸಾವಿತ್ರಿ ರಾಯನ್ನವರ ಪಾಲ್ಗೊಂಡಿದ್ದರು.

## ಜಿಲ್ಲಾಧಿಕಾರಿಗಳಿಂದ ಒಳ ಮೀಸಲಾತಿ ಗಣತಿ ಪರಿಶೀಲನೆ

**ಜಮಖಂಡಿ :** ನಗರದ ವಿವಿಧ ವಾರ್ಡಗಳಲ್ಲಿ ಜಿಲ್ಲಾಧಿಕಾರಿ ಕೆ. ಎಂ. ಜಾನಕಿ ಅವರು ಒಳ ಮೀಸಲಾತಿ ವರ್ಗೀಕರಣ ಜನಗಣತಿ ವೇಗವನ್ನು ಪರಿಶೀಲಿಸಿದರು. ನಗರದ ಟೀಚರ್ಸ ಕಾಲನಿ, ಮಹಾಲಿಂಗೇಶ್ವರ ಕಾಲನಿ, ರೆಹಮತ ನಗರ ಬಡಾವಣೆಗಳಿಗೆ ಭೇಟಿ ನೀಡಿದ ಅವರು, ಖುದ್ದಾಗಿ ನಿವಾಸಿಗಳ ಮನೆ ಮನೆಗಳಿಗೆ ತೆರಳಿ ಗಣತಿ ಕಾರ್ಯಕ್ಕೆ ಸಿಬ್ಬಂದಿಗಳು ಬಂದಿರುವ ಬಗ್ಗೆ ಮಾಹಿತಿ ಪಡೆದು ಕೊಂಡರು. ಒಳ ಮೀಸಲಾತಿಗಾಗಿ ಜಾತಿ ಗಣತಿ ನಡೆಯುತ್ತಿದ್ದು, ಯಾರೊಬ್ಬರೂ ಅದ–ರಿಂದ ವಂಚಿತರಾಗಬಾರದು.

ಗಣತಿ ಮಾಡುವ ಸಿಬ್ಬಂದಿಗಳು ಹಾಗೂ ಮೇಲ್ವಿಚಾರಕರು ಕೈಗೊಂಡಿರುವ ಕ್ರಮಗಳ ಬಗ್ಗೆ ಖುದ್ದಾಗಿ ಪರಿಶೀಲನೆ ನಡೆಸಿದರು. ಗಣತಿ ಕಾರ್ಯದಲ್ಲಿ ಆಧಾರ ಕಾರ್ಡ ಇಲ್ಲದವರು, ಶಾಲಾಮಕ್ಕಳು ಉಳಿದು ಬಿಡುತ್ತಾರೆ ಎಂಬ ದೂರುಗಳು ಕೇಳಿ ಬಂದಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು ಪರಿಶೀಲಿಸಿ ಮಾಹಿತಿ ಪಡೆದರು.

ಕಂದಾಯ ಉಪ ವಿಭಾಗಾಧಿಕಾರಿ ಶ್ವೇತಾ ಬೀಡಿಕರ, ತಹಸೀಲ್ದಾರ ಸದಾಶಿವ ಮಕ್ಕೊಜಿ, ಪೌರಾಯುಕ್ತೆ ಜ್ಯೋತಿ ಗಿರೀಶ, ಸಮಾಜಕಲ್ಯಾಣ ಇಲಾಖೆ ನಿರ್ದೇಶಕ ಜಗದೇವ ಪಾಸೋಡೆ ಸಹಿತ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಜರಿದ್ದರು.

# ರಾಜ್ಯ ಸರ್ಕಾರದ ಸರ್ವಾಧಿಕಾರಿ ಧೋರಣೆಗೆ ಹೆದರಲ್ಲ: ಜಿಗಜಿಣಗಿ



**ವಿಜಯಪುರ :** ರಾಜ್ಯದಲ್ಲಿರುವ ಆಡಳಿತಾರೂಢ ಕಾಂಗ್ರೆಸ್ ಸರ್ಕಾರದ ವೈಫಲ್ಯಗಳನ್ನು ಜನರ ಮುಂದೆ ಇರಿಸುವುದು ಪ್ರತಿಪಕ್ಷದ ಕರ್ತವ್ಯ. ಈ ಕರ್ತವ್ಯದ ಭಾಗವಾಗಿ ಬಿಜೆಪಿ ಚಾರ್ಜ್ ಶೀಟ್ ಪತ್ರಿಕೆಗಳಿಗೆ ಹೇಳಿಕೆ ಬಿಡುಗಡೆ ಮಾಡಿದೆ. ಆದರೆ ಇದರಲ್ಲೂ ದ್ವೇಷ ರಾಜಕಾರಣ ಸಾಧಿಸಲು ಹೊರಟಿರುವ ರಾಜ್ಯ ಕಾಂಗ್ರೆಸ್ ಸರ್ಕಾರ ಸರ್ವಾಧಿಕಾರಿ ಧೋರಣೆ ಮಾಡುತ್ತಿದೆ. ಆದರೆ ಇದಕ್ಕೆ ನಾವು ಹೆದರಲ್ಲ ಎಂದು ಸಂಸದ ರಮೇಶ ಜಿಗಜಿಣಗಿ ಗುಡುಗಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ನಾವು ಕಾಂಗ್ರೆಸ್ ಪಕ್ಷದ ದಮನ ನೀತಿಗೆ ಹೆದರುವುದಿಲ್ಲ. ನಮ್ಮ ಕಾರ್ಯಕರ್ತರು ಗಟ್ಟಿಯಾಗಿದ್ದಾರೆ. ಜನರಿಗಾಗಿ ಜೈಲಿಗೆ ಹೋಗಲು ಸಹ ನಾವೆಲ್ಲರೂ ಸಿದ್ಧರಿದ್ದೇವೆ.

ಒಂದು ರೀತಿ ಹಿಟ್ಲರ್ ಮನೋಸ್ಥಿತಿಯಲ್ಲಿ ರಾಜ್ಯ ಸರ್ಕಾರ ಕಾರ್ಯ ನಿರ್ವಹಿಸುತ್ತಿದೆ. ಸರ್ಕಾರ ವೈಫಲ್ಯವಾಗಿರುವುದು ನಿಜ. ಅದನ್ನು ಅಂಕಿ ಅಂಶಗಳನ್ನು ಜನರ ಮುಂದೆ ಮಾಧ್ಯಮ ಮೂಲಕ ಕರ್ತವ್ಯವನ್ನು ನಿಭಾಯಿಸುವುದು ವಿರೋಧ ಪಕ್ಷದ ಜವಾಬ್ದಾರಿ. ಆದರೆ ಇದನ್ನೇ ದ್ವೇಷ ಸಾಧಿಸಿಕೊಂಡು ಎಫ್‌ಐಆರ್ ದಾಖಲಿಸುವ ಮೂಲಕ ವಿರೋಧ ಪಕ್ಷಗಳನ್ನು ದಮನಗೊಳಿಸಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹರಣಗೊಳಿಸುವ ಮೂಲಕ ಅಘೋಷಿತ ತುರ್ತು ಪರಿಸ್ಥಿತಿ ಹೇರುವ ಸಿದ್ಧತೆ ಮಾಡಿಕೊಳ್ಳುತ್ತಿದೆ ಎಂದು ಜಿಗಜಿಣಗಿ ಕಿಡಿಕಾರಿದ್ದಾರೆ.

ರಾಜ್ಯ ಸರ್ಕಾರ ಈ ರೀತಿ ದಮನಕಾರಿ ನೀತಿಯ ವಿರುದ್ಧ ನಾವು ಸಂಘಟಿತ ಹೋರಾಟ ಮಾಡಲು ಹೆದರುವುದಿಲ್ಲ. ಸರ್ಕಾರ ಇನ್ನಾದರೂ ಸರ್ವಾಧಿಕಾರಿ ಧೋರಣೆ ಬದಿಗಿಟ್ಟು ಜನರ ಸಂಕಷ್ಟಗಳಿಗೆ ಸ್ಪಂದಿಸುವ ಕೆಲಸ ಮಾಡಲು ಮುಂದಾಗಬೇಕು ಹೊರತು ದಮನಕಾರಿ, ದ್ವೇಷರಾಜಕಾರಣವನ್ನು ಬಿಡಬೇಕು ಎಂದು ಅವರು ಒತ್ತಾಯಿಸಿದ್ದಾರೆ.

# ಸಿದ್ದರಾಮಯ್ಯ ನಂತರ ನಾನೇ 2ನೇ ಜನಪ್ರಿಯ ನಾಯಕ: ಯತ್ನಾಳ್

**ವಿಜಯಪುರ :** ಆದಷ್ಟು ಬೇಗನೆ ರಾಜ್ಯ ಬಿಜೆಪಿ ಅಧ್ಯಕ್ಷರ ಬದಲಾವಣೆ ಮಾಡಬಹುದು. ಪಾಕಿಸ್ತಾನ ಯುದ್ಧ ಹಿನ್ನೆಲೆಯಲ್ಲಿ ವರಿಷ್ಠರು ಈ ಸಂಬಂಧ ಗಮನಹರಿಸಲು ಸಾಧ್ಯವಾಗಿಲ್ಲ. ಬೇಗನೆ ರಾಜ್ಯ ಬಿಜೆಪಿ ಅಧ್ಯಕ್ಷರು ಬದಲಾವಣೆ ಮಾಡಬಹುದು ಎಂದು ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದರು.

ನಗರದಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ಬಿಜೆಪಿ ರಾಜ್ಯಾಧ್ಯಕ್ಷ ಬದಲಾವಣೆ ಆದಷ್ಟು ಬೇಗನೆ ಆಗುವ ನಿರೀಕ್ಷೆ ಇದೆ ಎಂದರು.

ರಾಜ್ಯ ಬಿಜೆಪಿ ಉಸ್ತುವಾರಿ ರಾಧಾ ಮೋಹನ್ ಅಗರವಾಲ್ ಭೇಟಿ ವಿಚಾರವಾಗಿ ಪ್ರತಿಕ್ರಿಯೆ ನೀಡಿ, ವಿಜಯೇಂದ್ರ ಸುಳ್ಳು ಸರ್ವೇ ಮಾಡಿಸಿದ್ದಾನೆ. ಚುನಾವಣೆ ನಡೆದರೆ 160 ಸ್ಥಾನ ಬರುತ್ತವೆ ಎಂಬುದು ಸುಳ್ಳು. ಅವರಪ್ಪ ಜನಪ್ರಿಯ ಇದ್ದಾಗಲೇ ಅಷ್ಟು ಸ್ಥಾನ ಬಂದಿಲ್ಲ. ಜಾತಿ ಸಮೀಕರಣ ಆಗಿಲ್ಲ.

ವಿರೋಧ ಪಕ್ಷವಾಗಿ ಬಿಜೆಪಿ ಪ್ರಬಲವಾಗಿ ಕೆಲಸ ಮಾಡಿಲ್ಲ. ಹಿಂದೂಗಳ ಕೊಲೆ ಆದರೆ ಮಾತನಾಡಲ್ಲ. ಹಿಂದೂಗಳ ರಕ್ಷಣೆ ಇಲ್ಲ. ಭ್ರಷ್ಟಾಚಾರ ಬಗ್ಗೆ ವಿಧಾನಸಭೆಯಲ್ಲಿ ಮಾತನಾಡಲ್ಲ. ಹೀಗಾಗಿ ಕೇಂದ್ರ ಹೈಕಮಾಂಡ್ ಬೇಸರ ವ್ಯಕ್ತಪಡಿಸಿದೆ.

ರಾಜ್ಯ ಉಸ್ತುವಾರಿ ಮುಕ್ತವಾಗಿ ಚರ್ಚೆ ಮಾಡಬೇಕು ಎಂದರು.

ಕೆಲ ವಿಜಯೇಂದ್ರ ಚೇಲಾಗಳು 224 ಸ್ಥಾನದಲ್ಲಿ 245 ಬರುವ ಸಂಭವವಿದೆ ಎಂದು ಹೊಗಳುತ್ತಾರೆ.

ರಾಜ್ಯ ಉಸ್ತುವಾರಿಗಳ ಒನ್ ಟು ಒನ್ ಮಾತನಾಡಬೇಕು. ಗುಂಪಿನಲ್ಲಿ ಕೇಳಿದರೆ ಯಾರೂ ಮಾತನಾಡಲ್ಲ. ಹಾಲಿ, ಮಾಜಿ ಶಾಸಕರ, ಪಕ್ಷ ಕಟ್ಟಿದವರನ್ನು, ಲೋಕಸಭಾ ಸದಸ್ಯರನ್ನು, ಪರಾಜಿತ ಅಭ್ಯರ್ಥಿಗಳನ್ನು ಮಾತನಾಡಿಸಲಿ ಎಂದು ಯತ್ನಾಳ್ ಸಲಹೆ ನೀಡಿದರು.

ಇಲ್ಲವಾದರೆ ಮುಂದಿನ ಚುನಾವಣೆಯಲ್ಲಿ ಬಿಜೆಪಿ ಗೆಲ್ಲಲಾಗದು ಎಂದೂ ಯತ್ನಾಳ್ ಹೇಳಿದರು.

ಬಿಜೆಪಿ ನಿಷ್ಠರು ಪಕ್ಷದಲ್ಲಿದ್ದಾರೆ. ನನ್ನ



ಉಚ್ಚಾಟನೆ ಮಾಡಿದ್ದಾರೆ. ಅವರ ಜೊತೆಗೆ ಗುರುತಿಸಿಕೊಂಡರೆ ಅವರಿಗೆ ತೊಂದರೆಯಾಗಬಾರದು ಎಂಬ ಕಾರಣಕ್ಕೆ ನಾನೇ ಅವರಿಂದ ಅಂತರ ಕಾಯ್ದುಕೊಂಡಿದ್ದೇನೆ. ಎಲ್ಲರೂ ನನ್ನ ಸಂಪರ್ಕದಲ್ಲಿದ್ದಾರೆ. ನಾನು ರಾಜ್ಯದ ಪ್ರವಾಸ ಮಾಡುತ್ತಿದ್ದೇನೆ. ನನಗೆ ಜನರ ಬೆಂಬಲ ಅಪಾರವಾಗಿ ಸಿಗುತ್ತಿದೆ. ಸಾವಿರಾರು ಜನರು ಸೇರುತ್ತಿದ್ದಾರೆ. ಯತ್ನಾಳ ಸಿಎಂ ಆದರೆ ಅಭಿವೃದ್ಧಿಯಾಗುತ್ತದೆ. ನೆಮ್ಮದಿ ಜೀವನ ಮಾಡಬಹುದು ಎಂಬ ವಾತಾವರಣ ಮನೆ ಮಾಡಿದೆ ಎಂದರು.

ಬಿಜೆಪಿಯಿಂದ ಉಚ್ಚಾಟನೆಯಾದ ಬಳಿಕ ನನ್ನ ಜನಪ್ರಿಯತೆ ಉತ್ತುಂಗಕ್ಕೆ ಏರಿದೆ. ರಾಜ್ಯದಲ್ಲಿ ಸಿದ್ದರಾಮಯ್ಯ ನಂತರ ನಾನೇ ಎರಡನೇ ಜನಪ್ರಿಯ ನಾಯಕ. ಈ ಕುರಿತು ಗುಪ್ತಚರ ವರದಿ ಸಿದ್ದರಾಮಯ್ಯ ಬಳಿಯೇ ಇದೆ. ಬಿಜೆಪಿ ತತ್ವ ಸಿದ್ಧಾಂತ ಬಿಡಲ್ಲಾ ಎಂದು ತಿಳಿಸಿದರು.

ಮೋದಿ, ವಾಜಪೇಯಿ, ಅಮೀತ್ ಶಾ, ನಡ್ಡಾ ಬಿ.ಎಲ್. ಸಂತೋಷ ನನ್ನ ನಾಯಕರು ಎಂದರು.

ಬಿಜೆಪಿ ಬಗ್ಗೆ ನನಗೆ ಗೌರವಿದೆ. ನಾ ಎಂದೂ ಬಿಜೆಪಿಗೆ ಬೈದಿಲ್ಲ. ಬಿಜೆಪಿಯಿಂದಲೇ ದೊಡ್ಡವರಾಗಿದ್ದೇವೆ. ಬಿಜೆಪಿ ಅನ್ನ ತಿನ್ನುತ್ತೇವೆ. ನಾವು ಪಕ್ಷ ನಿಷ್ಠರು. ವಿಜಯೇಂದ್ರನ ಹಾಗೆ ಪಕ್ಷ ದ್ರೋಹ ಕೆಲಸ ಮಾಡಲ್ಲ ಎಂದು ಯತ್ನಾಳ ನುಡಿದರು.

ಮೋದಿ ಬಗ್ಗೆ ಯಾರೇ ಮಾತನಾಡಿದರೂ ಸಹನೆ ಮಾಡಿಕೊಳ್ಳಲ್ಲಾ. ರಾಜ್ಯ ಬಿಜೆಪಿ ಉಸ್ತುವಾರಿಗಳು ಹೈಕಮಾಂಡ್‌ಗೆ ರಾಜ್ಯದ ವಾಸ್ತವ ವಿಷಯ ಹೇಳಬೇಕು.

ಸಭೆಯಾಚೆ ಬಹುತೇಕರು ವಿಜಯೇಂದ್ರ ವಿರುದ್ಧ ಮಾತನಾಡುತ್ತಾರೆ. 50 ಕ್ಕೂ ಹೆಚ್ಚು ಶಾಸಕರು ವಿಜಯೇಂದ್ರ ವಿರುದ್ಧವೇ ಮಾತನಾಡುತ್ತಾರೆ. ಯತ್ನಾಳ ವಾಪಸ್ ಸೇರ್ಪಡೆ ಕುರಿತು ಎಲ್ಲರ ಒಲವಿದೆ.

ನನ್ನ ವಾಪಸಾತಿ ವಿಚಾರವನ್ನು ರಮೇಶ ಜಾರಕಿಹೋಳಿ, ಅರವಿಂದ ಲಿಂಬಾವಳಿ, ಹರೀಶ್, ಸಿದ್ದೇಶ್ ಹಾಗೂ ಇತರರು ನೇತೃತ್ವ ವಹಿಸಿದ್ದಾರೆ. ಯತ್ನಾಳರಂತಹ ಒಳ್ಳೆ ನಾಯಕನನ್ನು ಕಳೆದುಕೊಂಡೆವು ಎಂದು ವರಿಷ್ಠರಿಗೆ ಅನಿಸುತ್ತಿದೆ. ಯತ್ನಾಳರಂತಹ ಒಳ್ಳೆ ನಾಯಕನನ್ನು ಕಳೆದುಕೊಂಡಿದ್ದೇವೆ. ಅದೇನೇ ತಪ್ಪಾಗಿದ್ದರೂ ಸರಿ ಮಾಡಲಾಗುತ್ತದೆ ಎಂದು ಕೆಲ ದೆಹಲಿ ನಾಯಕರು ರಮೇಶ ಜಾರಕಿಹೋಳಿಗೆ ಮಾತನಾಡಿದ್ದಾರೆ ಎಂದು ತಿಳಿಸಿದರು.

ವಿಜಯಪುರ ನಗರ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಲು ಇತರೆ ನಾಯಕರ ಪ್ರಯತ್ನ ಕುರಿತು ಪ್ರತಿಕ್ರಿಯಿಸಿ, ಮುಂದಿನ ಚುನಾವಣೆಯಲ್ಲಿ ನಾನೇ ಬಿಜೆಪಿ ಅಭ್ಯರ್ಥಿ ಎಂದು ಭವಿಷ್ಯ ನುಡಿದರು.

# ಬಂಜಾರ ಸಮಾಜದ ಪ್ರಕಾಶ ರಾಠೋಡ ವಿಧಾನ ಪರಿಷತ್ ಸದಸ್ಯ ಆಯ್ಕೆಗೆ ಒತ್ತಾಯ



**ಕೊಲ್ಹಾರ:** ಪಟ್ಟಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ವಿವಿಧ ಇಲಾಖೆಗಳ ಅಭಿವೃದ್ಧಿ ಯೋಜನೆಗಳ ಉದ್ಘಾಟನಾ ಸಮಾರಂಭದಲ್ಲಿ ಬಂಜಾರ ಸಮುದಾಯದಿಂದ ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ ರವರನ್ನು ಸನ್ಮಾನಿಸಿ, ಮನವಿ ಸಲ್ಲಿಸಿದರು.

ಪಟ್ಟಣದಲ್ಲಿ ಶನಿವಾರ ಬಂಜಾರ ಸಮಾಜದಿಂದ ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ರವರನ್ನು ಸನ್ಮಾನಿಸಿ ಗೌರವಿಸಲಾಯಿತು ಈ ಸಂದರ್ಭದಲ್ಲಿ ಹಿರಿಯರಾದ ಪ್ರಕಾಶ ರಾಠೋಡ ಇವರು ಕಾಂಗ್ರೆಸ ಪಕ್ಷದಲ್ಲಿ ಹಲವಾರು ವರ್ಷಗಳಿಂದ ಪಕ್ಷ ಸಂಘಟನೆ ಮಾಡಿ ಬೆಳೆಸಿದ್ದಾರೆ ಅವರ ಹಿರಿತನ ಗಮನಿಸಿ ಇಂತಹ ನಿಷ್ಠಾವಂತ ರಾಜಕಾರಣಿಯಾದ ಪ್ರಕಾಶ ರಾಠೋಡ ರವರಿಗೆ ವಿಧಾನ ಪರಿಷತ್ ಸದಸ್ಯರನ್ನಾಗಿ (ಒಐಅ) ಮಾಡಬೇಕು ಎಂದು ಮನವಿ ಸಲ್ಲಿಸಿದರು.

ಪರಿಶಿಷ್ಟ ಜಾತಿ ಗಣತಿ ದಿನಾಂಕ ವಿಸ್ತರಣೆ: ಮನವಿ.

ಪರಿಶಿಷ್ಟ ಜಾತಿ ಒಳಮೀಸಲಾತಿ ಗಣತಿ ಕಾರ್ಯದ ದಿನಾಂಕ ವಿಸ್ತರಣೆ ಮಾಡಲು ಮನವಿಯನ್ನು ಬಂಜಾರ ಸಮಾಜದಿಂದ ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಸಲ್ಲಿಸಿ ಈ ಸಂದರ್ಭದಲ್ಲಿ ಮಾಜಿ ತಾಲ್ಲೂಕು ಪಂಚಾಯಿತಿ ಉಪಾಧ್ಯಕ್ಷ ಈಶ್ವರ ಜಾದವ ಮಾಹಿತಿ ನೀಡಿದರು ನಮ್ಮ ಬಂಜಾರ ಸಮಾಜದ ಜನರು ಗುಳೆ ಹೋಗಿರುತ್ತಾರೆ, ದೂರದ ಗೋವಾ ಮಹಾರಾಷ್ಟ್ರ ರಾಜ್ಯಗಳಿಗೆ ಕೆಲಸಕ್ಕಾಗಿ ಗುಳೆ ಹೋಗಿ ಜೂನ್ ತಿಂಗಳಲ್ಲಿ ಮರಳುತ್ತಾರೆ ಆದ್ದರಿಂದ ಈಗಿನ ದಿನಾಂಕ ಜೂನ್ ತಿಂಗಳ ವರೆಗೆ ಮುಂದುವರಿಸಲು ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಈಶ್ವರ ಜಾದವ, ರಾಜು ರಾಠೋಡ, ಸುರೇಶ ನಾಯಕ, ಶಂಕರ ಚೌವ್ಹಾಣ,ಡಿ ಎಸ್ ನಾಯಕ, ನಾಮದೇವ ರಾಠೋಡ,ಅಪ್ಪಾಲಾಲ ನಾಯಕ ಹಾಜರಿದ್ದರು.

# ನಾಗಠಾಣದಲ್ಲಿ ಸಂಭ್ರಮದ ಚೌಡೇಶ್ವರಿ ದೇವಿಯ ಜಾತ್ರೆ

**ವಿಜಯಪುರ :** ಬಾದ್ಮಿ ಅಮಾವಾಸ್ಯೆ ನಿಮಿತ್ತ ತಾಲೂಕಿನ ನಾಗಠಾಣ ಗ್ರಾಮದಲ್ಲಿ ಶ್ರೀ ಚೌಡೇಶ್ವರಿ ಜಾತ್ರಾ ಮಹೋತ್ಸವ ಹಾಗೂ ದೇವಸ್ಥಾನದ ನೂತನ ಕಟ್ಟಡದ ಲೋಕಾರ್ಪಣೆ ಕಾರ್ಯಕ್ರಮ 5 ದಿನಗಳವರೆಗೆ ಜರುಗಿತು.

ಸೋಮವಾರದಂದು ಶ್ರೀ ಷ ಬ್ರ ಚನ್ನಮಲ್ಲಿಕಾರ್ಜುನ ಶಿವಾಚಾರ್ಯರ ನೇತೃತ್ವದಲ್ಲಿ ನೂತನ ಚೌಡೇಶ್ವರಿ ಮೂರ್ತಿ ಹಾಗೂ ಕಳಸದ ಭವ್ಯ ಮೆರವಣಿಗೆಯು ನೂರಾರು ತಾಯಂದಿರ ಕುಂಭ ಹಾಗೂ ಆರತಿ ಮೇಳದೊಂದಿಗೆ ಗ್ರಾಮದ ಬಜಾರ ಮಾರ್ಗವಾಗಿ ಸಾಗಿ, ಗಂಗೆ ಸೀತಾಳ ಪೂಜೆ ಮುಗಿಸಿಕೊಂಡು ಮರಳಿ ಗುಡಿಗೆ ಆಗಮಿಸಿತು. ನಂತರ ಪ್ರಾಣ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣ ನಡೆಯಿತು. ಹಾಗೆಯೇ ನೂರಾರು ಮುತ್ತೈದೆಯರ ಉಡಿ ತುಂಬುವ ಕಾರ್ಯಕ್ರಮ ಕೂಡ ನೆರವೇರಿತು. ಸಂಜೆ ಭಕ್ತ ಮಹಿಳೆಯರು



ಅಂಬಲಿ ಬಿಂದಿಗೆ ಹೊತ್ತು, ಬಾಸಿಂಗ, ಕಳಸದ ಮೆರವಣಿಗೆಯು ಗುಡಿ ತಲುಪಿ, ಅಲ್ಲಿ ಎಲ್ಲರೂ ಅಂಬಲಿ ಅರ್ಪಿಸಿದರು.

ಮಂಗಳವಾರದಂದು ಬೆಳಿಗ್ಗೆ ಗುಡಿಯಲ್ಲಿ ಹೋಮ ಹವನ ಮಾಡಿ, ಶ್ರೀ ಷ ಬ್ರ ಚನ್ನಮಲ್ಲಿಕಾರ್ಜುನ ಶಿವಾಚಾರ್ಯರು ಹಾಗೂ ಬೊಮ್ಮನಹಳ್ಳಿಯ ಗುರುಶಾಂತ ಶಿವಾಚಾರ್ಯರ ನೇತೃತ್ವದಲ್ಲಿ ಧರ್ಮ ಸಭೆ ಜರುಗಿತು. ಜಾತ್ರಾ ಮಹೋತ್ಸವದ ಅಂಗವಾಗಿ 5 ದಿನಗಳ ಕಾಲ ಗುಡೂರಿನ ಅನ್ನದಾನ ಶಾಸ್ತ್ರಿಗಳಿಂದ ಹಾಗೂ ಪ್ರೌಢಶಾಲಾ ಶಿಕ್ಷಕ ಪರಶುರಾಮ ಕುಂಬಾರ ಅವರಿಂದ ತಾಯಿ ಚೌಡೇಶ್ವರಿ ದೇವಿಯ ಪುರಾಣ ಜರುಗಿತು. ದೇವಿಯ ಮುಖವಾಡ ಹೊತ್ತವರು ಅಪಾರ ಸಂಖ್ಯೆಯ ಭಕ್ತರು, ವಾದ್ಯ ಮೇಳದೊಂದಿಗೆ ಸಾಗುತ್ತಾ, ಇಡೀ ಗ್ರಾಮದ ಭಕ್ತರ ಮನೆ ಮನೆಗೆ ಭೇಟಿ ನೀಡಿ, ಕಾಯಿ-ಕರ್ಪೂರದೊಂದಿಗೆ ನೈವೇದ್ಯ ಸ್ವೀಕರಿಸಿ, ಉಡಿ ತುಂಬಿಕೊಂಡು ಆಶೀರ್ವದಿಸುವ ದೃಶ್ಯ ವಿಶೇಷವಾಗಿತ್ತು.

ಕುಂಬಾರ ಮನೆತನದ ಮಹಿಳೆಯರು ಬಜಾರಕ್ಕೆ ಗುಡಿಯಿಂದ ಕಿಚಡಿ ತರುವರು. ಅಲ್ಲಿ ಔಡಲ ಕಟ್ಟಿಗೆಯ ಹಂದರದಲ್ಲಿ ಮಜ್ಜಿಗೆ ಕಡಿಯುವಳು. ತದನಂತರ ಅಲ್ಲಿಂದ ಕುಣಿಯುತ್ತಾ ಗುಡಿಗೆ ಮರಳಿ ಬರುವದು ಪ್ರತಿವರ್ಷದ ಸಂಪ್ರದಾಯವಾಗಿದೆ.

ಚೌಡೇಶ್ವರಿಯು ಅತ್ಯಂತ ಶಕ್ತಿಶಾಲಿ ದೇವತೆಗಳಲ್ಲಿ ಒಬ್ಬಳಾಗಿದ್ದು, ಈಕೆಯ ಬಳಿ ಏನೇ ಬೇಡಿಕೊಂಡರೂ ಅದು ಈಡೇರುತ್ತದೆ ಎನ್ನುವ ನಂಬಿಕೆ ನಾಗಠಾಣ ಗ್ರಾಮದ ಭಕ್ತರಲ್ಲಿ ಈಗಲೂ ಜನಜನಿತವಾಗಿದೆ.

ಕುಂಬಾರ ಮನೆತನದ ಭೀಮರಾಯ, ಅಮೋಘಸಿದ್ದ, ಪವಾಡೇಶ, ಶಿವಾನಂದ, ಅಮೋಘಸಿದ್ದ, ಮಲ್ಲು, ಶರಣು, ಸೋಮನಿಂಗ,ಶ್ರೀಶೈಲ,ಸಿದ್ದು,ಪುಂಡಲೀಕ, ವಿಠಲ,ಬಾಬು, ಮಹಾಂತೇಶ,ನರಸಪ್ಪ, ಹನಮಂತ,ಬಸವರಾಜ,ಪಿಂಟು,ಗಿರಮಲ್ಲ, ಚವಡಪ್ಪ, ಅರವಿಂದ ಸೇರಿದಂತೆ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿದ್ದರು.

# ಬಾಕಿ ಇರುವ ನರೇಗಾ ಕೂಲಿಯನ್ನು ತಕ್ಷಣ ಬಿಡುಗಡೆಗಾಗಿ ಎಐಕೆಕೆಎಂಎಸ್ ಪ್ರತಿಭಟನೆ

**ಬಳ್ಳಾರಿ:** ನರೇಗಾ ಯೋಜನೆಯಡಿ ಕೆಲಸ ಮಾಡಿದ ಕೂಲಿ ಕಾರ್ಮಿಕರ ಬಾಕಿ ವೇತನ ಬಿಡುಗಡೆಗೊಳಿಸಲು ಆಗ್ರಹಿಸಿ ಎ ಐ ಕೆ ಕೆ ಎಂ ಎಸ್ ರೈತ ಸಂಘಟನೆ ವತಿಯಿಂದ ನಗರದ ಜಿಲ್ಲಾ ಪಂಚಾಯಿತಿ ಮುಂದೆ ಇಂದು ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳವರಿಗೆ ಮತ್ತು ಅವರ ಮೂಲಕ ರಾಜ್ಯ ಮಾತ್ತುಕೇಂದ್ರಗ್ರಾಮೀಣಾಭಿವೃದ್ಧಿ ಸಚಿವರುಗಳಿಗೆ ಕೂಡಲೇ ಬಾಕಿ ಇರುವ ನರೇಗಾ ಕೂಲಿಯ ಹಣವನ್ನು ಬಿಡುಗಡೆ ಮಾಡಬೇಕೆಂದು ಆಗ್ರಹಿಸಿ ಮನವಿಪತ್ರ ಸಲ್ಲಿಸಲಾಯಿತು.

ಮನವಿ ಸ್ವೀಕರಿಸಿದ ಅಧಿಕಾರಿಗಳು ಈ ತಿಂಗಳ ಕೊನೆಯಲ್ಲಿ ಮುಖ್ಯ ಮಂತ್ರಿಗಳೊಂದಿಗೆ ನಡೆಯುವ ಸಭೆಯಲ್ಲಿ ಜಿಲ್ಲೆಯ ಪರವಾಗಿ ಈ ವಿಷಯವನ್ನು ಪ್ರಮುಖವಾಗಿ ಪ್ರಸ್ತಾಪಿಸಿ ನರೇಗಾ ಕೂಲಿಯನ್ನು ಬಿಡುಗಡೆಗೊಳಿಸಲು ಕೋರಲಾಗುವುದು ಜೊತೆಗೆ ಈ ಕುರಿತು ಕೇಂದ್ರಕ್ಕೂ ಪತ್ರ ಬರೆದು ಕೂಡಲೇ ನರೇಗಾ ಬಾಕಿ ವೇತನ ಬಿಡುಗಡೆಗಾಗಿ ಪ್ರಾಮಾಣಿಕವಾಗಿ ಪ್ರಯತ್ನಿಸುವುದಾಗಿ ಸಿಇಓ ತಿಳಿಸಿ, ಜಿಲ್ಲಾ ಮಟ್ಟದಲ್ಲಿ ಪರಿಹರಿಸಬಹುದಾದಂತ ಎಲ್ಲಾ ಸಮಸ್ಯೆಗಳನ್ನು ಕೂಡಲೇ ಬಗಹರಿಸುತ್ತೇವೆ. ಮತ್ತು ಏನೇ ಸಮಸ್ಯೆಗಳು ಇದ್ದಲ್ಲಿ ಕೂಲಿ ಕಾರ್ಮಿಕರು ನೇರವಾಗಿ ನಮ್ಮನ್ನು ಭೇಟಿಯಾಗಬಹುದು ಎಂದು ಭರವಸೆ ನೀಡಿದರು. ಈ ಪ್ರತಿಭಟನೆಯಲ್ಲಿ ಎಐಕೆಎಂಎಸ್ ಕಾರ್ಯಕರ್ತರುಮತ್ತುನೂರಾರು ಜನನರೇಗಾ ಕಾರ್ಮಿಕರು ಹಾಗೂ ರೈತರು ಭಾಗವಹಿಸಿದ್ದರು.

# ರಾಷ್ಟ್ರೀಯ ಸ್ವಯಂ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ

**ಮೂಡಲಗಿ :** ಪ್ರತಿ ವರ್ಷದಂತೆ ಪ್ರತಿಭಾವಂತ ವಿದ್ಯಾರ್ಥಿಯಾಗಿ ಹೊರಹೊಮ್ಮುವ ವಿದ್ಯಾರ್ಥಿಗಳಿಗೆ ಮಹಾವಿದ್ಯಾಲಯದ ಮಟ್ಟದಲ್ಲಿ ನೀಡಲಾಗುವ ಬಂಗಾರದ ಪದಕವನ್ನು ಮುಂಬರುವ ವರ್ಷಗಳಲ್ಲಿ ತಮ್ಮ ಪ್ರಾಯೋಜಕತ್ವದಲ್ಲಿ ವಿಶ್ವ ವಿದ್ಯಾಲಯದ ಮಟ್ಟದಲ್ಲಿ ನೀಡಲಾಗುವುದು ಎಂದು ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವ ವಿದ್ಯಾಲಯದ ವಿದ್ಯಾರ್ಥಿ ಕಲ್ಯಾಣ ಅಧಿಕಾರಿ ಡೀನ ಡಾ. ಕೆ. ರಾಮಚಂದ್ರ ನಾಯ್ಕ ಹೇಳಿದರು.

ಅವರು ಸಮೀಪದ ಅರಭಾಂವಿಯ ಕಿತ್ತೂರ ರಾಣಿ ಚನ್ನಮ್ಮ ತೋಟಗಾರಿಕೆ ಮಹಾ ವಿದ್ಯಾಲಯದಿಂದ ಗೋಕಾಕ ತಾಲೂಕಿನ ಹಿರೇನಂದಿ ಗ್ರಾಮದಲ್ಲಿ ಹಮ್ಮಿಕೊಂಡ ರಾಷ್ಟ್ರೀಯ ಸ್ವಯಂ ಸೇವಾ ಯೋಜನೆಯ ವಾರ್ಷಿಕ ನಾಲ್ಕನೇ ದಿನದ ವಿಶೇಷ ಶಿಭಿರವನ್ನು ಉದ್ಘಾಟಿಸಿ ಮಾತನಾಡಿದರು.

ಕಿತ್ತೂರು ರಾಣಿ ಚೆನ್ನಮ್ಮ ತೋಟಗಾರಿಕಾ ಮಹಾವಿದ್ಯಾಲಯದ ಏಳನೇ ದಿನದ ಧ್ವಜಾರೋಹಣ ಕಾರ್ಯಕ್ರಮವನ್ನು ಎನ್.ಎಸ್.ಎಸ್. ಅಧಿಕಾರಿಗಳ ಉಪಸ್ಥಿತಿಯಲ್ಲಿ ಪೋಷಕ ಸಿಬ್ಬಂದಿ ಡಾ. ಚೈತ್ರಾ ಕುಲಕರ್ಣಿ ಇವರು ನಡೆಸಿಕೊಟ್ಟರು.

ರಾಚಪ್ಪ ಮಠಪತಿ ಎನ್.ಎಸ್.ಎಸ್. ಶಿಬಿರದ ವರದಿ ವಾಚನ ಮಾಡಿದರು. ಮಹಾವಿದ್ಯಾಲಯದ ಡೀನ್ ಡಾ. ಎಂ. ಜಿ. ಕೆರುಟಗಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಅತಿಥಿಗಳಾಗಿ ಸಿದ್ದಲಿಂಗಯ್ಯ ಪೂಜಾರಿ, ಗಂಗಾಧರ ಹಾರೋಗೊಪ್ಪ, ವಿಠಲ ಪೂಜಾರಿ, ಗ್ರಾಮ ಪಂಚಾಯತಿ ಸದಸ್ಯರು, ಬಸವರಾಜ ಹಾರೋಗೊಪ್ಪ ಎನ್.ಎಸ್.ಎಸ್. ಅಧಿಕಾರಿಗಳಾದ ಡಾ. ಎಸ್. ಜಿ. ಪ್ರವೀಣಕುಮಾರ, ಡಾ. ಪ್ರತೀಕ್ಷಾ,

ಡಾ. ರಾಘವೇಂದ್ರ ಕೆ.ಎಸ್. ಪೋಷಕ ಸಿಬ್ಬಂದಿ ಡಾ. ಶಶಿಧರ ದೊಡಮನಿ ಹಾಗೂ ಡಾ. ಚೈತ್ರಾ ಕುಲಕರ್ಣಿ ಆಗಮಿಸಿದ್ದರು.

ಎನ್.ಎಸ್.ಎಸ್. ಸ್ವಯಂ ಸೇವಕರು ತಮಗಾದ ವೈಯಕ್ತಿಕ ಅನುಭವಗಳನ್ನು ಹಂಚಿಕೊಂಡರು. ಎನ್.ಎಸ್.ಎಸ್. ಶಿಬಿರದಲ್ಲಿ ಕೈಗೊಂಡ ಅನೇಕ ಕಾರ್ಯಕ್ರಮಗಳಲ್ಲಿ ಉತ್ತಮ ಪ್ರದರ್ಶನ ನೀಡಿದ ಸ್ವಯಂ ಸೇವಕರ ಗುಂಪುಗಳಿಗೆ ಬಹುಮಾನ ವಿತರಣೆ,

ಶಿಬಿರದಲ್ಲಿ ಉತ್ತಮ ಮುಂದಾಳತ್ವ ವಹಿಸಿದ ಸ್ವಯಂ ಸೇವಕರಿಗೆ ಪ್ರಮಾಣ ಪತ್ರ ವಿತರಣೆ ಮಾಡಲಾಯಿತು. ಈ ಕಾರ್ಯಕ್ರಮವನ್ನು ದಿಕ್ಷಿತಾ ಸ್ವಾಗತಿಸಿದರು. ಮನೋಜಕುಮಾರ ನಿರೂಪಿಸಿದರು.

# ಬಡವರಿಗೆ ಕಡಿಮೆ ದರದಲ್ಲಿ ಔಷಧಿ: ಗದ್ದಿಗೌಡರ

**ಗುಳೇದಗುಡ್ಡ :** ಸಮೀಪದ ಕೋಟೆಕಲ್ಲ ಗ್ರಾಮದಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ಕೋಟೆಕಲ್ ವತಿಯಿಂದ ಪಟ್ಟಣದ ಚೌ ಬಜಾರದಲ್ಲಿ ಪ್ರಧಾನಮಂತ್ರಿ ಭಾರತೀಯ ಜನ ಔಷಧಿ ಕೇಂದ್ರವನ್ನು ಸಂಸದ ಪಿ.ಸಿ.ಗದ್ದಿಗೌಡರ ಅವರು ಉದ್ಘಾಟಿಸಿದರು.

ನಂತರ ಮಾತನಾಡಿದ ಸಂಸದ ಪಿ.ಸಿ.ಗದ್ದಿಗೌಡರ ಅವರು, ಬಡವರಿಗೆ ಔಷಧಿಗಳು ಕಡಿಮೆ ದರದಲ್ಲಿ ಸಿಗುವಂತಾಗಬೇಕೆಂಬ ಉದ್ದೇಶದಿಂಧ ಪ್ರಧಾನ ಮಂತ್ರಿಗಳು ಜನೌಷಧಿ ಕೇಂದ್ರಗಳನ್ನು ಆರಂಭಿಸಿದ್ದಾರೆ. ಇಲ್ಲಿ ಎಲ್ಲ ತೆರನಾದ ಔಷಧಿಗಳು ಅತ್ಯಂತ ಕಡಿಮೆ ಬೆಲೆಯಲ್ಲಿ ಲಭ್ಯವಿದ್ದು, ಎಲ್ಲರೂ ಪ್ರಧಾನ ಮಂತ್ರಿ ಜನೌಷಧಿ ಕೇಂದ್ರದಲ್ಲಿನ ಗುಣಮಟ್ಟದ ಔಷಧಗಳ ಸದುಪಯೋಗಪಡಿಸಿಕೊಳ್ಳಬೇಕು ಎಂದು ಹೇಳಿದರು.

ಮುರುಘಾಮಠದ ಶ್ರೀಕಾಶಿನಾಥ ಸ್ವಾಮಿಗಳು, ಶ್ರೀಜಗದ್ಗುರು ಗುರುಸಿದ್ದೇಶ್ವರ ಬ್ರಹನ್ಮಠದ ಶ್ರೀ ಜಗದ್ಗುರು ಗುರುಸಿದ್ಧ ಪಟ್ಟಧಾರ್ಯ ಸ್ವಾಮಿಗಳು ಸಾನಿಧ್ಯ ವಹಿಸಿದ್ದರು. ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ



ಸಂಘದ ಅಧ್ಯಕ್ಷ ಹನುಮಂತ ಮಾವಿನಮರ ಕೇಂದ್ರದ ಉದ್ಘಾಟನೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಕುಮಾರಗೌಡ ಜನಾಲಿ, ಸಹಕಾರ ಸಂಘಗಳ ಅಪರ ನಿಬಂಧಕ ಎಸ್. ಎನ್. ನೀಲಪ್ಪನವರ, ಡಿಡಿಎಂ ನಬಾರ್ಡ್ ಮಂಜುನಾಥ ರೆಡ್ಡಿ, ಸಹಕಾರ ಸಂಘಗಳ ಉಪನಿಬಂಧಕ ದಾನಯ್ಯ ಹಿರೇಮಠ, ಮಾಗುಂಡಪ್ಪ ಸುಂಕದ, ಉಪಾಧ್ಯಕ್ಷ ಲಕ್ಷ್ಮಣ ಹಾಲನ್ನವರ, ಯಲಗುರದಪ್ಪ ತೊಗಲಂಗಿ, ಮಳಿಯಪ್ಪ ಹಾವಡಿ, ನಾಗೇಶ ಮುರಗೋಡ, ಸಂಗಪ್ಪ ಹಡಪದ, ಪ್ರಕಾಶ ಕಳ್ಳಿಗುಡ್ಡ, ಪ್ರಕಾಶ ವಾಳದುಂಕಿ, ಮಹೇಶ ಬಿಜಾಪೂರ, ಸಂತೋಷ ನಾಯನೇಗಲಿ, ವೈ.ಜಿ.ತಳವಾರ, ಸಂಗಮೇಶ ಚಿಕ್ಕಾಡಿ, ಸಂತೋಷ ತಿಪ್ಪಾ, ದ್ಯಾಮಣ್ಣ ಗದ್ದನಕೇರಿ, ಯಮನಪ್ಪ ರಾಠೋಡ, ಶ್ರೀಕಾಂತ ಹುನಗುಂದ,

ಪಿಕೆಪಿಎಸ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರು ಕಲ್ಯಾಣಿ, ಸಚಿನ ರಾಂಪೂರ, ಅಶೋಕ ಗೌಡರ ಸೇರಿದಂತೆ ಇತರರು ಇದ್ದರು.

# ಸ್ನೇಹ ಸಾಗರ ಬಳಗದಿಂದ ನಿವೃತ್ತ ಯೋಧನಿಗೆ ಸನ್ಮಾನ



**ಕೂಡ್ಲಿಗಿ :** ವರ್ಷ ಭಾರತೀಯ ಗಡಿಭದ್ರತ ಪಡೆಯಲ್ಲಿ ಬಿ.ಎಸ್.ಎಫ್ ಸೇನೆಯಲ್ಲಿ ಸೇವೆ ಸಲ್ಲಿಸಿ ಇತ್ತೀಚಿನ ದಿನಗಳಲ್ಲಿ ನಿವೃತ್ತಿ ಹೊಂದಿದ ವೀರ ಯೋಧ ಜಿ ಶರಣೇಶ್ ಯಾದವ್ ಕ್ಯಾಸನಕೆರೆ ಇವರ ದಂಪತಿಗಳಿಗೆ ವಿದ್ಯಾಭ್ಯಾಸ ಮಾಡಿದ ಸ್ನೇಹ ಸಾಗರ ಬಳಗದಿಂದ ಸನ್ಮಾನಿಸಿ ಗೌರವಿಸಲಾಯಿತು. ತಾಲೂಕಿನ ಕಾನಮಡಗು ಗ್ರಾಮದ ಶ್ರೀ ಸಿದ್ದಲಿಂಗೇಶ್ವರ ಪದವಿ ಪೂರ್ವ ಕಾಲೇಜಿನಲ್ಲಿ 1999-2000 ಸಾಲಿನಲ್ಲಿ ವಿದ್ಯಾಭ್ಯಾಸ ಮಾಡಿದ ಸ್ನೇಹ ಸಾಗರ ಬಳಗದಿಂದ ಮಂಗಳವಾರ ಶ್ರೀ ಶರಣಬಸವೇಶ್ವರ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಸನ್ಮಾನಿಸಲಾಯಿತು.

ಈ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ದಾ.ಮ. ಶರಣಾರ್ಯರು ದಾಸೋಹ ಮಠ ಕಾನಮಡುಗು ವಹಿಸಿಕೊಂಡರು. ಇದೇ ಸಂದರ್ಭದಲ್ಲಿ ಸಿಆರ್‌ಪಿಎಫ್ ನಲ್ಲಿ ದೇಶ ಸೇವೆ ಮಾಡಿ ಸ್ವಯಂ ನಿವೃತ್ತಿ ಪಡೆದ ಆಲೂರು ಯೋಧ ಯಾಹಿಯ ಇವರಿಗೂ ಸನ್ಮಾನಿಸಲಾಯಿತು.

ಈ ಕಾರ್ಯಕ್ರಮದಲ್ಲಿ ನಾಗಲಿಂಗಪ್ಪ ಪ್ರಾಂಶುಪಾಲರು ಶ್ರೀ ಸಿದ್ದಲಿಂಗೇಶ್ವರ ಪದವಿ ಪೂರ್ವ ಕಾಲೇಜ್, ದಯಾನಂದ ಸಜ್ಜನ್ ಹುಲಿಕೆರೆ,

ಎನ್ ಪಕೀರಪ್ಪ, ಬಸವ ಕುಮಾರ್ ಟಿ ಸಿ, ತಿಪ್ಪೇರುದ್ರಪ್ಪ ಬಿ.ಜಿ, ಶರಣಬಸಪ್ಪ.ಕೆ, ಪ್ರಕಾಶ್ ಪೊಲೀಸ್, ವಿಜಯಕುಮಾರ್ ಪೊಲೀಸ್, ಪ್ರತಾಪ್ ಸಿಂಹ, ಮಂಜಣ್ಣ ಹೊಸಹಳ್ಳಿ, ಹೇಮಗಿರಿ, ಕೆ.ಎನ್ ಮಂಜುನಾಥ, ಸತೀಶ್, ಬಿ ಮಂಜುಳಾ, ಕೆ ಪಿ ಆಶಾ, ಪರಿಮಳ, ಗೀತಾ, ಬಸಮ್ಮ, ಗಿರಿಜಮ್ಮ, ನೂರ್ ಜಾನ್ ಬಿ ಸೇರಿದಂತೆ ಊರಿನ ಗಣ್ಯರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಈ ಈ ಕಾರ್ಯಕ್ರಮದಲ್ಲಿ ನಿರೂಪಣೆಯನ್ನು ಬಸವರಾಜ್ ಕೆ ನೆರವೇರಿಸಿದರು ಹಾಗೂ ಶರಣಬಸಪ್ಪ ಕೆ ಸ್ವಾಗತಿಸಿದರು, ಬಸೆಟ್ಟಪ್ಪ ಡಿ ಎಂ ವಂದನಾರ್ಪಣೆಯನ್ನು ನೆರವೇರಿಸಿದರು.

# ರೈತರಿಗೆ ಸಮರ್ಪಕ ಬೀಜ ಗೊಬ್ಬರ ನಿಗದಿತ ಸಮಯದಲ್ಲಿ ಪೂರೈಸಿ

**ಕೂಡ್ಲಿಗಿ :** ಮುಂಗಾರು ಆರಂಭವಾಗಿದ್ದು ರೈತರಿಗೆ ಬಿತ್ತನೆ ಬೀಜ, ರಸಗೊಬ್ಬರಗಳನ್ನು ಸಮರ್ಪಕವಾಗಿ ಪೂರೈಕೆ ಮಾಡಬೇಕು ದರವನ್ನು ಕಡಿಮೆ ಮಾಡಿ ಪೂರೈಸುವಂತೆ ಕರ್ನಾಟಕ ರಾಜ್ಯ ರೈತ ಸಂಘ(ಹುಚ್ಚವನಹಳ್ಳಿ ಮಂಜುನಾಥ ಬಣ) ಹಾಗು ಹಸಿರು ಸೇನೆ ವತಿಯಿಂದ ಗುರುವಾರ ಕೃಷಿ ಅಧಿಕಾರಿ ನೀಲನಾಯ್ಕ್ ಮೂಲಕ ಕೃಷಿ ಸಚಿವ ಚೆಲುವರಾಯ ಸ್ವಾಮಿಗೆ ಮನವಿ ಪತ್ರ ನೀಡಿದರು. ಈ ಸಂಧರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಕಾರ್ಯಧ್ಯಕ್ಷ ಬಾಣದ ಕೃಷ್ಣ ಮಾತನಾಡಿ, ಪ್ರಸಕ್ತ ವರ್ಷ ಮುಂಗಾರು ಪೂರ್ವದಲ್ಲಿ ಉತ್ತಮ ಮಳೆಯಾಗಿದೆ.ಇದರಿಂದ ಬಿತ್ತನಗೆ ಮುಂಚೆ ಕೃಷಿ ಚಟುವಟಿಕೆಗಳನ್ನು ಮಾಡಿ ಬಿತ್ತನೆಗೆ ಅಣಿ ಮಾಡಿದ್ದಾರೆ. ಈಗಾಗಲೇ ಮುಂಗಾರು ಸಹ ಆರಂಭವಾಗಿದ್ದು ವಾಡಿಕೆಗಿಂತಲೂ ಹೆಚ್ಚು ಮಳೆಯಾಗಿದೆ. ರೋಹಿಣಿ ಮಳೆಗೆ ರೈತರು ಹೈಬ್ರೀಡ್ ಜೋಳ, ಮೆಕ್ಕೆಜೋಳ, ರಾಗಿ, ಸಜ್ಜೆ, ತೊಗರಿ ಸೇರಿದಂತೆ ವಿವಿಧ ಬೆಳೆಗಳ ಬಿತ್ತನೆಗೆ ಸಜ್ಜಾಗಿದ್ದಾರೆ. ಆದ್ದರಿಂದ ರೈತರಿಗೆ ಬಿತ್ತನೆಗೆ ಪೂರಕವಾಗಿ ಬೀಜಗಳು ಹಾಗೂ ರಸ ಗೊಬ್ಬರವನ್ನು ಕೊರತೆಯಾಗದಂತೆ ಪೂರೈಸಬೇಕು. ಇಲ್ಲಿಯವರೆಗೂ ತಾಲೂಕಿನಲ್ಲಿ ಡಿಎಪಿ ಪೂರೈಕೆ ಮಾಡಿಲ್ಲ, ಹೊಸಹಳ್ಳಿ ಹಾಗೂ ಗುಡೇಕೋಟೆ ಹೋಬಳಿಗಳಲ್ಲಿ ಯಥೇಚ್ಛವಾಗಿ ಶೇಂಗಾ ಬಿತ್ತನೆ ಮಾಡುತ್ತಾರೆ. ಆದ್ದರಿಂದ ಶೇಂಗಾ ಬಿತ್ತನೆಗೆ ಡಿಎಪಿ ಗೊಬ್ಬರ ಪೂರೈಸ ಬೇಕು. ಈ ಬಾರಿ



ರಸ ಗೊಬ್ಬರ ದರವನ್ನು ಹೇರಿಕೆ ಮಾಡಿದ್ದು, ಹಿಂದಿನ ವರ್ಷದ ದರ ದಂತೆ ರಸಗೊಬ್ಬರವನ್ನು ನೀಡಬೇಕು ಹಾಗೂ ರೈತರಿಗೆ ರಸ ಗೊಬ್ಬರವನ್ನು ಸಮರ್ಪಕವಾಗಿ ಪೂರೈಸಲು ಸ್ಥಳೀಯ ವ್ಯವಸಾಯ ಸೇವಾ ಸಂಘ ಹಾಗೂ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ವಿತರಣೆ ಮಾಡಬೇಕು ಎಂದು ಒತ್ತಾಯಿಸಿದರು. ಜತೆಗೆ ಕೃಷಿಗೆ ಪರಿಕರಗಳಾದ ರಂಟೆ, ಟಿಲ್ಲರ್, ರೂಟರ್ ಮತ್ತು ತಾಡಪಾಲ್ ಗಳನ್ನು ಹೆಚ್ಚು ಪೂರೈಕೆ ಮಾಡಬೇಕು ಎಂದು ಆಗ್ರಹಿಸಿದರು.

ಕೃಷಿ ಅಧಿಕಾರಿ ನೀಲನಾಯ್ಕ್ ಮನವಿ ಪತ್ರ ಸ್ವೀಕಾರ ಮಾಡಿದರು. ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಸಹ ಕಾರ್ಯದರ್ಶಿ ಶಂಕರ್, ತಾಲೂಕು ಅಧ್ಯಕ್ಷ ಬಾಣದ ಮಾರುತಿ, ಹಸಿರು ಸೇನೆ ತಾಲೂಕು ಅಧ್ಯಕ್ಷ ಬಿ.ನವೀನ್ ಕುಮಾರ್, ಉಪಾಧ್ಯಕ್ಷ ಫಯಾಜ್, ಕಾರ್ಯದರ್ಶಿ ವಿಜಯಕುಮಾರ್, ಖಜಾಂಚಿ ಹೇಮಂತ್ ಸೇರಿದಂತೆ ಅನೇಕರು ಇದ್ದರು.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State

Designed by MKG-9535762618